ಕಲ್ಯಾಣ ಕಿರಣ


ಏಪ್ರಿಲ್ 2004

ಬೆಲೆ : ರೂ. 5-00





ಭದ್ರಾವತಿಯ ಬಸವ ಮಂಟಪದ ಉದ್ಘಾಟನೆಗೆ ಆಗಮಿಸುತ್ತಿರುವ ಪರಮ ಪೂಜ್ಯ ಮಾತಾಜಿರವರಿಗೆ
ಭದ್ರಾವತಿ ರಾಷ್ಟ್ರೀಯ ಬಸವ ದಳದ ಶರಣ ವೃಂದದವರಿಂದ ಭಕ್ತಿ ಪೂರ್ವಕವಾಗಿ ಆರತಿ ಬೆಳಗುತ್ತ ಸ್ವಾಗತ



ಪೂಜ್ಯ ಮಾತಾಜಿಯವರಿಂದ ವಿಶ್ವಗುರು ಬಸವಣ್ಣನವರ ಪೂಜೆ

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 35 | ಬಸವ ಶಕೆ 870 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -02 | ಏಪ್ರಿಲ್ 2004 | ವಾರ್ಷಿಕ ಚಂದಾ 50/- ರೂ

ನುಡಿ ನೈವೇದ್ಯ

ಕಲ್ಯಾಣದ ಕರೆ ಕಲ್ಯಾಣಕೆ ಕರೆ

ಕಲ್ಯಾಣ ಕರೆದಿದೆ ಕಲ್ಯಾಣ, ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ, ವಿಶ್ವಕೆ ಬಯಸುತ ಕಲ್ಯಾಣ ॥ ಪ ॥

ಭಾರತ ಮಾತೆಯ ಮುಕುಟ ಕಾಶ್ಮೀರ, ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ ಶರಣರ ಕರೆದಿದೆ ಕಲ್ಯಾಣ ॥ ಅ.ಪ॥

ಗುರು ಬಸವಣ್ಣನ ಪ್ರಭೆಯನು ಬೆಳಗಲು ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ ಅರಿವಿನ ನೆಲೆಯಾಯ್ತು ಕಲ್ಯಾಣ ॥1॥

ಕಾಯಕವೇ ಕೈಲಾಸವೆಂದು ಸಂದೇಶ ಸಾರಿದ ಕಲ್ಯಾಣ
ದಯವೇ ಧರ್ಮದ ಮೂಲವೆಂದು ಪ್ರೇಮವ ಮೆರೆದ ಕಲ್ಯಾಣ ॥2॥

ನಾಡ ಬಲ್ಲಿದರೆಲ್ಲ ಕೂಡಿದರಂದು ಸೂಡ ಕಟ್ಟಿದರು ವಚನಗಳ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಸಮತೆಯ ಸಾರಿತು ಕಲ್ಯಾಣ ॥3॥

ಅಲ್ಲಮಪ್ರಭುದೇವ ಅಕ್ಕಮಹಾದೇವಿ ಚಿನ್ಮಯಜ್ಞಾನಿ ಚನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ ಮಹಾಮನೆ ಹೊಂದಿದ್ದ ಕಲ್ಯಾಣ ॥4॥

ಹರಳಯ್ಯ ಮಧುವಯ್ಯ ಮೋಳಿಗೆ ಮಾರಯ್ಯ ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣನ ಕಲ್ಯಾಣ ॥5॥

ಅನುಭವ ಮಂಟಪ ರಚಿಸಿದರಂದು ಅನುಭಾವ ಗೀತೆಯ ಹಾಡಲಿಕೆಂದು
ವಚನ ಪುಷ್ಪಗಳ ಬಂಡನು ಸವಿಯಲು ಧಾವಿಸಿ ಬಂದಿತು ಶರಣರ ದಂಡು ॥6॥

ಬನ್ನಿರಿ ಶರಣರೆ ಬಸವ ಕಲ್ಯಾಣಕೆ ಬಸವ ಮಹಾಮನೆ ಕಟ್ಟುವ ಬನ್ನಿ
ತನುಮನಧನಗಳ ಧಾರೆಯನೆರೆದು ನವ ಕಲ್ಯಾಣವ ನಿರ್ಮಿಸ ಬನ್ನಿ ॥7॥

ಕಲ್ಯಾಣ ಪರ್ವದಿ ನಲಿಯುವ ಬನ್ನಿ, ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸ ಬನ್ನಿ, ಬಸವಾತ್ಮಜೆಯ ಬಿನ್ನಹವಿದುವು ॥8॥

- ಬಸವಾತ್ಮಜೆ

★ ಕಲ್ಯಾಣ ಕಿರಣ ★

ಸಂಪುಟ 35	ಬಸವ ಶಕೆ 870	ಆಜೀವ ಸದಸ್ಯತ್ವ 500 ರೂ
ಸಂಚಿಕೆ -02	ಏಪ್ರಿಲ್ 2004	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಬಸವ ತತ್ತ್ವ ಪರೀಕ್ಷೆಗಳು

ಬಸವ ಧರ್ಮ ಪೀಠದ ಆಶ್ರಯದಲ್ಲಿ ಶ್ರೀ ಬಸವೇಶ್ವರ ದಿವ್ಯ ಜ್ಞಾನ ವಿದ್ಯಾಲಯದವರು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ನಿರ್ದೇಶನದಲ್ಲಿ ಬಸವ ತತ್ತ್ವ ಪ್ರವೇಶ, ಬಸವ ತತ್ತ್ವ ಪರಿಚಯ, ಬಸವ ತತ್ತ್ವ ಪ್ರವೀಣ, ಬಸವ ತತ್ತ್ವ ಪ್ರಕಾಶ ಪರೀಕ್ಷೆಗಳನ್ನು ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ನಡೆಸಬೇಕೆಂದು ನಿರ್ಧರಿಸಿದ್ದಾರೆ. ಈಗ ಬೇಸಿಗೆ ರಜೆ ಇರುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ಈ ಬಗ್ಗೆ ಗಮನ ಹರಿಸಿ ಮತ್ತು ಆಸಕ್ತಿವಹಿಸಿ ಪರೀಕ್ಷೆಗಳನ್ನು ಕಟ್ಟಿ ತೇರ್ಗಡೆ ಹೊಂದುವ ಮೂಲಕ ಬಸವ ಜ್ಞಾನ ಪಡೆಯುವುದರಲ್ಲಿ ಮುಂದಾಗಬೇಕೆಂದು ಸೂಚಿಸುತ್ತೇವೆ. ರಾ.ಬ.ದಳದವರು ಮತ್ತು ಪೋಷಕರು ಈ ಬಗ್ಗೆ ಹೆಚ್ಚಾಗಿ ಆಸಕ್ತಿವಹಿಸಿ ಪರೀಕ್ಷೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಹೆಚ್ಚು ಜನರಿಗೆ ಪ್ರೇರಣೆ ತುಂಬಿ ಪರೀಕ್ಷೆಗೆ ಕೂಡಿಸಲು ಸಹಕರಿಸಬೇಕೆಂದು ವಿನಂತಿಸುತ್ತೇವೆ. ಅರ್ಜಿ ತೆಗೆದುಕೊಳ್ಳಲು ಕೊನೆಯ ದಿನಾಂಕ : 10-5-04

ವಿ. ಸೂ : ಕಲ್ಯಾಣ ಪರ್ವ ಸಂದರ್ಭದಲ್ಲಿ ಅರ್ಜಿಗಳನ್ನು ಪಡೆಯಬಹುದು

ವ್ಯವಹರಿಸುವ ವಿಳಾಸ : ನಿರ್ದೇಶಕರು

ಬಸವ ತತ್ತ್ವ ಪರೀಕ್ಷೆಗಳು
ಬಸವ ಗಂಗೋತ್ರಿ, ಮೈಸೂರ್ ರಸ್ತೆ,
ಕುಂಬಳಗೋಡು - 560074


KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 28437234



ಧರ್ಮಗುರು ಬಸವಣ್ಣ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

866666



ಗಣ ಧ್ವಜ

ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಮೂರನೆಯ

ಕಲ್ಯಾಣ ಪರ್ವ

ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಮೇ 1, 2 ಮತ್ತು 3 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ತರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ, ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 2 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ (ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ / ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸಂಪಾದಕೀಯ

ಪ್ರಾದೇಶಿಕ ಪಕ್ಷಕ್ಕೇ ಇಂದು ಸುವರ್ಣಾವಕಾಶ

ಕನ್ನಡ ನಾಡು ಪಾರ್ಟಿ ಕರ್ನಾಟಕದ ಆಶಾ ಕಿರಣ

– ಜಗದ್ಗುರು ಮಾತೆ ಮಹಾದೇವಿ

ಭಾರತವು ವೈವಿಧ್ಯಮಯ ಭಾಷೆ, ಸಂಸ್ಕೃತಿ, ವೇಷ ಭೂಷಣ, ಭೌಗೋಳಿಕ ಲಕ್ಷಣ ಎಲ್ಲ ದೃಷ್ಟಿಯಿಂದಲೂ ಸಂಕೀರ್ಣವಾದ ದೇಶ. ಒಂದು ದೃಷ್ಟಿಯಿಂದ ಇಲ್ಲಿ ನೋಡಿದಾಗ ವೈವಿಧ್ಯತೆಯಲ್ಲಿ ಏಕತೆಯ ಸಾಮರಸ್ಯ ಕಂಡರೆ ಇನ್ನೊಂದು ದೃಷ್ಟಿಯಿಂದ ಏಕತೆಯಲ್ಲೇ ವೈವಿಧ್ಯತೆಯ ಸಂಘರ್ಷವೂ ಕಾಣಬರುತ್ತದೆ. ಈ ವಿಲಕ್ಷಣ ದ್ವಂದ್ವಕ್ಕೆ ಹಲವಾರು ಕಾರಣಗಳು ಇವೆಯಾದರೂ ಆ ಬಗ್ಗೆ ಚರ್ಚೆ ಇಂದಿನ ಸನ್ನಿವೇಶದಲ್ಲಿ ಅಪ್ರಸುತ್ತ. ರಾಜರ ಆಳ್ವಿಕೆಯ ಕಾಲದಲ್ಲಿ ಚಕ್ರವರ್ತಿಯ ರಾಜ್ಯದ ಗಡಿಯ ಮೇಲೆ ಪ್ರಾದೇಶಿಕ ವಿಭಜನೆ ಇದ್ದರೆ ಭಾರತವು ಸ್ವತಂತ್ರಗೊಂಡ ಕೆಲವು ಕಾಲದ ಮೇಲೆ ಭಾಷಾವಾರು ಪ್ರಾಂತ್ಯದ ರಚನೆಯಾಯಿತು. ಹಳೆಯ ಮೈಸೂರು ರಾಜ್ಯದ ಎಂಟು ಜಿಲ್ಲೆಗಳ ಭೂ ಭಾಗಕ್ಕೆ ಮುಂಬೈ, ಹೈದರಾಬಾದ್, ಮದ್ರಾಸ್, ಆಂಧ್ರ, ಕೇರಳ– ರಾಜ್ಯಗಳ ಕೆಲವೊಂದು ಜಿಲ್ಲೆಗಳು, ಹಲವು ಪ್ರದೇಶಗಳು ಸೇರ್ಪಡೆಗೊಂಡು ಸಾಂಸ್ಕೃತಿಕ ಪರಂಪರೆಯ ಅಖಂಡ ಕರ್ನಾಟಕ– ಕನ್ನಡವನ್ನು ಮಾತೃಭಾಷೆಯನ್ನಾಗಿ ಹೊಂದಿದ ಜನರು , ಒಂದು ಪ್ರದೇಶ ರೂಪುಗೊಂಡಿತು. ಸೀಮಿತ ವ್ಯಾಪ್ತಿಯ ಹೆಸರು 'ಮೈಸೂರು ರಾಜ್ಯ' ಎಂಬುದು ಹೋಗಿ ''ಕರ್ನಾಟಕ'' ಎಂಬ ವಿಶಾಲ ವ್ಯಾಪ್ತಿಯ ಹೆಸರು ಕನ್ನಡದ ರಾಜ್ಯಕ್ಕೆ ಕೆಲವರ ಹೋರಾಟದ ನಂತರ ದೊರೆಯಿತು. ಅಪ್ಪಟ ಕನ್ನಡ ಪ್ರದೇಶಗಳಾದ ಸೊಲ್ಲಾಪುರ, ಅಕ್ಕಲಕೋಟೆ, ಕಾಸರಗೋಡು ಇನ್ನೂ ಹೊರಗೆ ಉಳಿದಿದ್ದು ಕನ್ನಡಮ್ಮನ ಮಡಿಲಿನಿಂದ ದೂರವಾಗಿ ಉಳಿದವಲ್ಲ ಎಂಬ ವಿಷಾದವಿದ್ದರೂ ಕನ್ನಡ ಭಾಷೆಯ ಆಧಾರದ ಮೇಲೆ ರಾಜ್ಯ ರಚನೆ ಆಗಿರುವುದರಿಂದ ಈ ಪ್ರಾದೇಶಿಕ ಭಾಷೆ ಮತ್ತು ನಾಡು ಸರ್ವಾಂಗೀಣವಾಗಿ ಬೆಳೆಯಬಹುದೆಂಬ ಸಮಾಧಾನ – ಸಂತೋಷ ಉಂಟಾಯಿತು.

ಪ್ರಾದೇಶಿಕ ಅಸಮತೋಲನ

ಕರ್ನಾಟಕ ಮಧ್ಯಭಾಗದಲ್ಲಿ ಇರದ ರಾಜಧಾನಿಯಿಂದಾಗಿಯೋ ಏನೋ ಮುಂಬೈ ಮತ್ತು ಹೈದ್ರಬಾದ್ ಕರ್ನಾಟಕ ಭಾಗಗಳು ಹಿಂದಿನ ದುಃಸ್ಥಿತಿಯಲ್ಲೇ ಉಳಿಯುತ್ತ ಬಂದವು. ಇದಕ್ಕೆ ಕಾರಣ ಆಳುವವರ ನಿರ್ಲಕ್ಷ್ಯ ಮಾತ್ರವಲ್ಲ; ಆಯ್ಕೆಯಾಗಿ ಹೋದ ಪ್ರತಿನಿಧಿಗಳ ನಿರಾಸಕ್ತಿ ಇದಕ್ಕಿಂತ ಮಿಗಿಲಾಗಿ ಸ್ವಹಿತಾಸಕ್ತಿಯೂ ಕಾರಣವಿರಬಹುದು. ಈಗೀಗ ಕೆಲವರಲ್ಲಿ ಜಾಗೃತಿ ಮೂಡಿ, ಪುನಃ ಪ್ರತ್ಯೇಕ ಉತ್ತರ ಕರ್ನಾಟಕದ ಕೂಗು ಎದ್ದಿತಾದರೂ ಇದಕ್ಕೆ ಪ್ರಾಜ್ಞರಾದ ಕನ್ನಡಿಗರು ಯಾರೂ ಸ್ಪಂದಿಸುತ್ತಿಲ್ಲ. ಕೆಲವು ರಾಜಕಾರಣಿಗಳು ತಾವು ಅಧಿಕಾರದಲ್ಲಿದ್ದಾಗ ದಿವ್ಯ ಮೌನಿಗಳಾಗಿ ತಾವು ವೈಯಕ್ತಿಕವಾಗಿ ಬೆಳೆದಿದ್ದು ಅಧಿಕಾರದಿಂದ ವಂಚಿತರಾಗಿ ಮೂಲೆಗುಂಪಾದಾಗ ರಾಜ್ಯದ ಅಥವಾ ಅವರ ಸಮಾಜಗಳ ನೆನಪಾಗಿ ಅವಕ್ಕೆ ಅನ್ಯಾಯವಾಯಿತೆಂದು ಹಲುಬುವುದುಂಟು ಎಂಬುದನ್ನು ಮನಗಂಡಿರುವ ಕರ್ನಾಟಿಗರು

ಈ ವಿಭಜನಾಕಾಂಕ್ಷಿಗಳ ಮುಲುಗಾಟಕ್ಕೆ ಸ್ಪಂದಿಸಿಲ್ಲ. ಈ ನಿರ್ಲಿಪ್ತ ಸ್ಥಿತಿಗೆ ಕಾರಣ ವಿಭಜನಾಕಾಂಕ್ಷಿಗಳ ಸಂಕುಚಿತ ದೃಷ್ಟಿಕೋನವೊಂದೇ ಆಗಿರದೆ ಕರ್ನಾಟಿಗರ ನಿರಭಿಮಾನವೂ ಸಹ ಆಗಿರುವ ಸಾಧ್ಯತೆ ಇದೆ. ಜೊತೆಗೆ ಇನ್ನೊಂದು ಕರುಳ ಕಳಕಳಿಯೂ ಕೆಲವರದ್ದಾಗಿದೆ. ಕನ್ನಡ ಭಾಷೆ ಮಾತನಾಡುವ ಪ್ರದೇಶಗಳೆಲ್ಲ ಒಂದಾಗ ಬೇಕೆಂದು ಪ್ರಾಮಾಣಿಕ ಹೋರಾಟ ಮಾಡಿ ಒಂದಾದ ಮೇಲೆ ಪುನಃ ಒಡೆಯುವ ಹುನ್ನಾರವೇಕೆ ? ಏನು ದೋಷವಿದೆಯೋ ಅದನ್ನು ಸರಿಪಡಿಸಿಕೊಂಡರಾಯಿತು ಎಂಬ ಚಿಂತನೆ. ಈ ಮೂರನೆಯ ವರ್ಗದವರದು. ಕನ್ನಡದಲ್ಲಿ ಒಂದು ಅರ್ಥಪೂರ್ಣ ಗಾದೆ ಇದೆ. ಕನ್ನಡಿಗರ ಸ್ವಭಾವ ಹೇಗೆಂದರೆ ''ಮಲಗಿದರೆ ಕುಂಭಕರ್ಣ, ಎದ್ದರೆ ವೀರಭದ್ರ''. ವೀರಭದ್ರರಂತೆ ಹೋರಾಡಿ ಅಖಂಡ ಕರ್ನಾಟಕದ ರಚನೆಗೆ ಕಾರಣರಾಗಿರುವ ಕನ್ನಡದ ವೀರ ಸೇನಾನಿಗಳ ನಂತರ ಇಂದು ಕುಂಭಕರ್ಣರಂತೆ ನಿದ್ರಿಸುತ್ತಿದ್ದರೆ ಇದು ಕನ್ನಡಿಗರಿಗೆ ಸಹಜವೆನಿಸುವುದಿಲ್ಲವೆ ? ಹಾಗಂತ ಈ ನಿದ್ರಾವಸ್ಥೆಯನ್ನೇ ಆದರ್ಶ ಮನಸ್ಥಿತಿ ಎಂದು ಭಾವಿಸಿಬಿಡಬೇಕೆ ?

ಕನ್ನಡ ನಾಡು ಪಾರ್ಟಿಯ ಉದಯ

ದೆಹಲಿಯಲ್ಲಿ ನಿಯಂತ್ರಣ ಇಟ್ಟುಕೊಂಡ ಪಕ್ಷಗಳು ಕರ್ನಾಟಕದ ನೆಲ, ಜಲ, ಸಂಪನ್ಮೂಲ, ಹಿತರಕ್ಷಣೆ ಬಗ್ಗೆ ಉದಾಸೀನ ತೋರಿದರೆ ಇದನ್ನು ಕಂಡು ಅಸಹನೆಯಿಂದ ಪ್ರತ್ಯೇಕತೆಯ ಕೂಗೆಬ್ಬಿಸಿದರೆ ಸಮಸ್ಯೆಗಳು ಪರಿಹಾರವಾಗವುದುಂಟೆ ? ತಮ್ಮ ಪ್ರಾಂತೀಯ ಹಿತರಕ್ಷಣೆಯ ದೃಷ್ಟಿಯಿಂದ ಪ್ರಾದೇಶಿಕ ಪಕ್ಷವನ್ನು ಕಟ್ಟಿ ಈಗಾಗಲೇ ಯಶಸ್ವಿಯಾಗಿರುವುದು ಮಾತ್ರವಲ್ಲ ಕೇಂದ್ರ ಸರ್ಕಾರದ ಮೇಲೆ ಸಹ ತಮ್ಮ ಪ್ರಭಾವ ಬೀರುತ್ತಲಿರುವ ಡಿ.ಎಂ.ಕೆ, ಅಣ್ಣಾ ಡಿ.ಎಂ.ಕೆ.ಗಳು ತಮಿಳು ನಾಡಿನಲ್ಲಿ, ಮಹಾರಾಷ್ಟ್ರದಲ್ಲಿ ಶಿವಸೇನೆ, ಆಂಧ್ರದಲ್ಲಿ ತೆಲುಗುದೇಶಂ, ಅಸ್ಸಾಂನಲ್ಲಿ ಅಸ್ಸಾಂ ಗಣಪರಿಷತ್, ಪಂಜಾಬಿನಲ್ಲಿ ಅಕಾಲಿದಳ ಇರುವಾಗ ಕರ್ನಾಟಕದಲ್ಲಿ ಏಕೆ ಯಾರೂ ಪ್ರಾದೇಶಿಕ ಪಕ್ಷವನ್ನು ಸ್ಥಾಪಿಸುತ್ತಿಲ್ಲ ಎಂಬ ಕಳವಳ ಅನೇಕರನ್ನು ಕಾಡುತ್ತಿತ್ತು. ಈ ಹಿಂದೆ ಕೆಲವರು ಪ್ರಾದೇಶಿಕ ಪಕ್ಷವನ್ನು ಕಟ್ಟುವ ಪ್ರಯತ್ನ ಮಾಡಿರುವುದು ಸತ್ಯವೆ. ದಿ|| ದೇವರಾಜ ಅರಸು, ನಂತರ ಎಸ್. ಬಂಗಾರಪ್ಪ ಮುಂತಾದವರು ಪ್ರಯತ್ನಿಸಿ ವಿಫಲರಾಗಿದ್ದಾರೆ. ಇದೇ ರೀತಿ ಪತ್ರಕರ್ತರು, ಸಾಹಿತಿಯೂ ಆಗಿದ್ದ ಲಂಕೇಶ್ ಅವರು ಪ್ರಯತ್ನಿಸಿ ಸೋತರು. ಹೀಗಾಗಿ ಅಸಂಖ್ಯಾತ ಜನರಲ್ಲಿ ಪ್ರಾದೇಶಿಕ ಪಕ್ಷವೊಂದರ ಅಗತ್ಯವಿದೆ ಎಂಬ ಭಾವ ಮೂಡಿದ್ದರೂ ''ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಯಲ್ಲಿಲ್ಲ'' ಎಂಬ ಗಾದೆಯಂತೆ ಅನಿವಾರ್ಯವಾಗಿ ಹಂಬಲವನ್ನು ಹತ್ತಿಕ್ಕಿಕೊಂಡಿದ್ದರು.

ಇಂತಹ ಎಲ್ಲ ಕೋಟ್ಯಂತರ ಜನರ ಅಂತರಂಗದ ಹಂಬಲಕ್ಕೆ ಅಭಿವ್ಯಕ್ತ ರೂಪಕೊಡುವಂತೆ ನಾಡಿನ ಯಶಸ್ವಿ ಉದ್ಯಮಿ, ಶುದ್ಧ ಕಾಯಕದ ವ್ಯವಸ್ಥೆಯ ಮೇಲೆ ಬೆಳೆದ ಶ್ರೀ ವಿಜಯ ಸಂಕೇಶ್ವರರು ಕನ್ನಡ ನಾಡು ಪಾರ್ಟಿಯನ್ನು ಸ್ಥಾಪಿಸಿದಾಗ ಈ ಸುದ್ದಿ ಅಸಂಖ್ಯಾತರನ್ನು ಪುಳಕಿತಗೊಳಿಸಿತು. ಕಾರ್ಗತ್ತಲಲ್ಲಿ ದಾರಿ ಕಾಣದೆ ತಡವರಿಸುತ್ತ ದಿಙ್ಮೂಢರಾದವರಿಗೆ ಕೈದೀವಿಗೆಯೊಂದು ಸಿಕ್ಕಿದಂತೆ ಅನೇಕರು ಸ್ಫೂರ್ತಿಚೇತನರಾಗಿ, ಈ ಕುರಿತು ಚಿಂತನೆ ಮಾಡತೊಡಗಿದರು.

ಕನ್ನಡ ನಾಡು ಪಾರ್ಟಿಯ ಕ್ಷಿಪ್ರಗತಿಯ ಬೆಳವಣಿಗೆ

ಪ್ರಾದೇಶಿಕ ಪಕ್ಷಗಳಿಗೆ ಕರ್ನಾಟಕದಲ್ಲಿ ಬೆಂಬಲ ಸಿಗದು ಎಂದು ಮೊದಲೇ ಮೂಗೆಳೆಯುತ್ತಿದ್ದ

ಕೆಲವು ಜನ ಮತ್ತು ಸದಾ ನಕಾರಾತ್ಮಕವಾಗಿಯೇ ಆಲೋಚಿಸುವ ಮತ್ತೆ ಕೆಲವರು - ಇವರೆಲ್ಲರನ್ನು ಚಕಿತಗೊಳಿಸುವಂತೆ 2003ನೇಯ ಇಸವಿ ಮೇ 28ರಂದು ಶ್ರೀ ವಿಜಯ ಸಂಕೇಶ್ವರ ಅವರು ಸ್ಥಾಪಿಸಿದ ಕನ್ನಡ ನಾಡು ಪಾರ್ಟಿ 10 ತಿಂಗಳ ಅವಧಿಯಲ್ಲಿ ಬೆಳೆದು, ಬಲಗೊಂಡು ವಿಸ್ತಾರವಾಗುತ್ತಿದೆ. ಈ ಯಶಸ್ಸಿಗೆ ಕಾರಣಗಳಿಲ್ಲದಿಲ್ಲ. ಹಿಂದೆ ಕಟ್ಟಲ್ಪಟ್ಟ ಅನೇಕ ಪ್ರಾದೇಶಿಕ ಪಕ್ಷಗಳು ಸ್ಪಷ್ಟ ಮತ್ತು ವಿಧಾಯಕ, ಗುರಿ ಇಲ್ಲದೆ ಯಾರ ಮೇಲೋ ಸೇಡು ತೀರಿಸಿಕೊಳ್ಳುವ, ಅವರಿಗೆ ಬೆದರುಗೊಂಬೆಗಳಾಗುವ ಉದ್ದೇಶ ಹೊಂದಿದ್ದುದು ಅವುಗಳ ವಿಫಲತೆಗೆ ಒಂದು ಕಾರಣವಾಗಿರಬಹುದು. ಆ ಪಕ್ಷಗಳಿಗೆ ಯಾವುದೇ ಸೈದ್ಧಾಂತಿಕ ಚೌಕಟ್ಟು ಇಲ್ಲದುದು, ಸ್ಥಾಪಕರ ಬಳಿ ದೂರಗಾಮಿ ಚಿಂತನೆ ಇಲ್ಲದೆ ಬರಿ ಹಣದ ಥೈಲಿ ದೊಡ್ಡದಾಗಿ ಇದ್ದುದು, ಜನ ಸಾಮಾನ್ಯರ ಸಂಪರ್ಕವೇ ಇಲ್ಲದ ದಂತಗೋಪುರದಲ್ಲಿ ಕುಳಿತು ಆಲೋಚನೆ ಮಾಡುವವರ ಸಾರಥ್ಯ ಹೊಂದಿದ್ದು ಇವೆಲ್ಲ ಆ ಪಕ್ಷಗಳ ವಿಫಲತೆಗೆ ಕಾರಣವಿರಬಹುದು.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡ ನಾಡು ಪಾರ್ಟಿಯ ಸಂಸ್ಥಾಪಕ ಶ್ರೀ ವಿಜಯ ಸಂಕೇಶ್ವರರು ಬೇರೆಯೇ ಆಗಿ ನಿಲ್ಲುತ್ತಾರೆ. ''ವ್ಯಕ್ತಿಗಿಂತಲೂ ಪಕ್ಷ ದೊಡ್ಡದು ; ಆದರೆ ಪಕ್ಷದ ಹಿತಕ್ಕಿಂತಲೂ ರಾಜ್ಯದ ಹಿತ ಇನ್ನೂ ಹಿರಿದು'' ಎಂದು ಅವರು ಭಾರತೀಯ ಜನತಾ ಪಕ್ಷವನ್ನು ಬಿಟ್ಟು ಬಂದರು. ಹೊಲಸೆದ್ದು ಹೋಗಿರುವ ರಾಜಕೀಯದಿಂದ ನಿವೃತ್ತಿ ಹೊಂದಿ ತಮ್ಮ ಉದ್ಯಮ ಕ್ಷೇತ್ರಕ್ಕೆ ಸೀಮಿತರಾಗಬೇಕು ಎಂದುಕೊಂಡಿದ್ದಾಗ ನಾಡಿನ ಜನತೆಯ ಸಂಕಷ್ಟವು ಹತಚೇತನರಾಗಿ ಕುಳಿತುಕೊಳ್ಳದೆ ಹೊಸ ಪಕ್ಷವನ್ನು ಕಟ್ಟಿ ಸಕ್ರಿಯ, ಚೈತನ್ಯಶೀಲ ರಾಜಕಾರಣಕ್ಕೆ ಧುಮುಕಲು ಪ್ರೇರಣೆ ನೀಡಿತು. ಈ ಪ್ರಾಮಾಣಿಕ ಕಳಕಳಿಯೇ ಶ್ರೀ ಸಂಕೇಶ್ವರ ಅವರ ಸಾಧನೆಯ ಹಿಂದಿನ ಮೂಲ ಸೆಲೆ. ಕೇವಲ ದಂತಗೋಪುರದ ಕನಸುಗಾರರಾಗದೆ ಶ್ರೀ ಸಂಕೇಶ್ವರರು ಪ್ರಯೋಗಶೀಲ ಕ್ರಿಯಾಯೋಗಿಯಾಗಿ ದೂರಗಾಮಿ ಚಿಂತನೆ ಹೊಂದಿರುವುದೂ ಕನ್ನಡ ನಾಡು ಪಾರ್ಟಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಪಾರ್ಟಿಯ ಏಳಿಗೆಯಲ್ಲಿ ಗರಿಷ್ಠ ಶಕ್ತಿಯನ್ನು ಒದಗಿಸಿದ್ದು ವಿಜಯ ಕರ್ನಾಟಕ ಪತ್ರಿಕೆಯ ಜಾಲ ಎಂದರೆ ಉತ್ಪ್ರೇಕ್ಷೆಯಾಗದು. ಒಂದೊಂದೇ ಹೆಜ್ಜೆಯನ್ನು ಊರ್ಧ್ವಮುಖವಾಗಿ ಇಡುತ್ತ ಮೇಲೇರಿದ ವಿಜಯ ಸಂಕೇಶ್ವರರ ದಿಟ್ಟ ಮತ್ತು ಸ್ಪಷ್ಟ ನಿಲುವಿನಿಂದಾಗಿ ದಿನ ಪತ್ರಿಕೆಗಳು ಕಡಿಮೆ ಬೆಲೆಯಲ್ಲಿ ಜ್ಞಾನದ ಕಿಟಕಿಗಳನ್ನು ತೆರೆಯುವಂತಾಯಿತು. ಸೂರ್ಯೋದಯವಾಗುವಾಗಲೇ ಮನೆ ಬಾಗಿಲಿಗೆ ಬಂದು ಜನತೆಯ ಒಳಗಣ್ಣನ್ನು ತೆರೆಸಲು ಸಾಧನಗಳಾದ ವಿಜಯ ಕರ್ನಾಟಕ ಮತ್ತು ವಿಜಯ ಟೈಮ್ಸ್ ಒಂದು ರೀತಿ ಸಮುದಾಯ ಶಿಕ್ಷಣ (mass education) ಕೊಡುವಲ್ಲಿ ನೆರವಾಗಿವೆ ಎಂದರೆ ಉತ್ಪ್ರೇಕ್ಷೆ ಏನಲ್ಲ.

ಪ್ರಾದೇಶಿಕ ಪಕ್ಷದ ಆವಶ್ಯಕತೆ

ದೇಶದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅಸಂಖ್ಯಾತರ ತ್ಯಾಗ ಮತ್ತು ದೂರದರ್ಶಿತ್ವಗಳ ಫಲವಾಗಿ ಹುಟ್ಟಿದ ಕಾಂಗ್ರೆಸ್ ದಿನದಿನಕ್ಕೆ ಎಲ್ಲ ಆದರ್ಶಗಳಿಂದ ದೂರಸರಿದು ಧನ ಮತ್ತು ತೋಳ್‌ಬಲದ ರಾಜಕಾರಣಕ್ಕೆ ಜೋತುಬಿದ್ದಾಗ ದೇಶದಲ್ಲಿನ ಎಲ್ಲ ಪ್ರಜ್ಞಾವಂತರು ಖಿನ್ನರಾದರು. ಪ್ರಾದೇಶಿಕ ಪಕ್ಷಗಳ ಜನನಕ್ಕೆ ಪ್ರೇರಣೆ ನೀಡಿದ ಮತ್ತೊಂದು ಕಾರಣ ಉತ್ತರ ಭಾರತದವರ ಯಜಮಾನಿಕೆಯ ಧೋರಣೆ. ತಮಿಳು ನಾಡಿನಲ್ಲಿ ಆರಂಭವಾದ ಪ್ರತಿಭಟನಾತ್ಮಕ ಚಳುವಳಿ ಡಿ.ಎಂ.ಕೆ

ರೂಪದಲ್ಲಿ ಮೂರ್ತಿಗೊಂಡು ನಂತರ ಮಹಾರಾಷ್ಟ್ರದಲ್ಲಿ ಶಿವಸೇನೆ, ಆಂಧ್ರ ಪ್ರದೇಶದಲ್ಲಿ ತೆಲುಗುದೇಶಂ ಜನನಕ್ಕೆ ಕಾರಣವಾಯಿತು. ಆಗಿನ ಕಾಲದಲ್ಲಿದ್ದ ಸಂಘರ್ಷಾತ್ಮಕ ಧೋರಣೆಯ ತೀವ್ರತೆ ಈಗಿಲ್ಲವಾದರೂ ಕರ್ನಾಟಕದ ಹಿತರಕ್ಷಣೆಯ ದೃಷ್ಟಿಯಿಂದ ಪ್ರಾದೇಶಿಕ ಪಕ್ಷದ ಅಗತ್ಯವಿದೆ ಎಂಬ ಭಾವ ಎಲ್ಲರಲ್ಲಿ ತುಡಿಯುತ್ತಿತ್ತು. ಈ ಹಂಬಲದ ಹಿಂದೆ ಪ್ರತ್ಯೇಕತಾವಾದ ಅಥವಾ ಆಕ್ರಮಣಶೀಲತೆಯ ದ್ವೇಷವಿರದೆ ಕೇವಲ ಆತ್ಮರಕ್ಷಣೆಯ ಆಶಯ ಮಿಡಿಯುತ್ತಿತ್ತು. ಈ ಹಂಬಲಕ್ಕೆ ಸ್ಪಷ್ಟರೂಪ ಕೊಟ್ಟ ಕೀರ್ತಿಗೆ ವಿಜಯ ಸಂಕೇಶ್ವರ ಭಾಜನರಾಗುತ್ತಾರೆ. ಪೃಥ್ವಿಯು ತನ್ನ ಅಕ್ಷದ ಸುತ್ತ ತಿರುಗುತ್ತಲೇ ಸೌರವ್ಯೂಹದಲ್ಲಿ ತಿರುಗುವಂತೆ ಪ್ರಾದೇಶಿಕ ಹಿತರಕ್ಷಣೆ ಮಾಡುತ್ತಲೇ ರಾಷ್ಟ್ರೀಯ ಸಮಗ್ರ ಬೆಳಣಿಗೆಯಲ್ಲಿ ರಾಜ್ಯಗಳು ತೊಡಗಿಸಿಕೊಳ್ಳಲು ಸಾಧ್ಯವಾಗದೇಕೆ? ಎಂಬ ಆಲೋಚನೆ ನನ್ನಲ್ಲಿ ಸುಳಿಯುತ್ತಿದ್ದಂತೆ ಎಷ್ಟೋ ಜನರಲ್ಲಿ ಸುಳಿಯುತ್ತಿದ್ದಿರಬಹುದು. ಈ ಭಾವನೆ ಮೂಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುನಿಸಿನ ಆಟಗಳ ಮಧ್ಯೆ 'ಗಂಡ ಹೆಂಡತಿಯ ಜಗಳದ ಮಧ್ಯೆ ಕೂಸು ಬಡವಾದಂತೆ' ಎಂಬ ಗಾದೆಯಂತೆ ಕರ್ನಾಟಕದ ಕೂಗು ಅರಣ್ಯರೋದನವಾಗುತ್ತಿತ್ತು. ''ಒತ್ತಿದರೆ ಸರಿಯಣ್ಣ, ಸರಿದರೆ ಒತ್ತಣ್ಣ'' ಎಂಬ ಧೋರಣೆ ಹೊಂದಿದ ಕೇಂದ್ರ ಸರ್ಕಾರ ಇನ್ನಿತರ ರಾಜ್ಯಗಳ ಆಶಯಕ್ಕೆ ಸ್ಪಂದಿಸಿದಷ್ಟು ಕರ್ನಾಟಕದ ಅಳುಬುರುಕುತನಕ್ಕೆ ಸ್ಪಂದಿಸದಿದ್ದಾಗಲೆಲ್ಲ ನಮ್ಮಗಳ ಅಂತರಂಗದಲ್ಲಿ ಮುಳ್ಳು ಅಲುಕಿದಂತಾಗುತ್ತಿತ್ತು. ಹೀಗಾಗಿ ವಿಜಯ ಸಂಕೇಶ್ವರರು ರಾಷ್ಟ್ರೀಯ ಪಕ್ಷಗಳ ಪ್ರಭಾವ ಪ್ರವಾಹದ ವಿರುದ್ಧ ಈಜುವಂತೆ ಕನ್ನಡ ನಾಡು ಪಕ್ಷವನ್ನು ಸ್ಥಾಪಿಸುತ್ತಿದ್ದಂತೆಯೇ ಇದೇ ದಿಶೆಯಲ್ಲಿ ಆಲೋಚಿಸುತ್ತಿದ್ದ ಅನೇಕರಿಗೆ ಅಪೂರ್ವ ಸಂತೋಷ ಉಂಟಾಗುವುದು ಸಹಜವಲ್ಲವೆ?

ಸಾಮಾನ್ಯವಾಗಿ ನಿರಾಶಾವಾದಿಗಳು, ನಕಾರಾತ್ಮಕ ಧೋರಣೆ ಉಳ್ಳಜನರು ಉದಾತ್ತ ಪ್ರಯತ್ನವೊಂದನ್ನು ಅರ್ಥಮಾಡಿಕೊಳ್ಳಲೂ ಬಯಸದೆ ಹೀಗೆ ಪ್ರತಿಕ್ರಿಯೆ ವ್ಯಕ್ತಪಡಿಸುವುದುಂಟು. ತಮಿಳು ನಾಡಿನ ಜನರು, ಆಂಧ್ರ ದೇಶದವರು ಭಾವಾವೇಶದ ಜನರು; ಸಿನಿಮಾ ನಟನಟಿಯರನ್ನು ದೇವರುಗಳೆಂದು ಆರಾಧಿಸಿ ಅವರಿಗಾಗಿ ಗುಡಿ ಕಟ್ಟಿರುವುದೂ ಉಂಟು. ಮಹಾರಾಷ್ಟ್ರದವರು ಭಾಷಾಭಿಮಾನ ಉತ್ಕಟ ಹಂತ ತಲುಪಿದವರು. ಹೀಗಾಗಿ ಆ ರಾಜ್ಯಗಳವರು ಪ್ರಾದೇಶಿಕ ಪಕ್ಷಗಳನ್ನು ಬೆಂಬಲಿಸಿದರು. ಅಂಥ ಭಾವೋದ್ರಿಕ್ತತೆ ಕರ್ನಾಟಕದವರಲ್ಲಿ ಇಲ್ಲ. ಆದ್ದರಿಂದ ಇಲ್ಲಿ ''ಪ್ರಾದೇಶಿಕ ಪಕ್ಷಗಳಿಗೆ ಭವಿಷ್ಯವಿಲ್ಲ ಎಂದು ಕೆಲವರು ನಿರುತ್ಸಾಹ ಉಂಟುಮಾಡಲು ಯತ್ನಿಸುವುದೇ ಅಲ್ಲದೆ ಜನರಲ್ಲಿ ತಪ್ಪುಕಲ್ಪನೆ ಉಂಟಾಗುವಂತೆ ಅಭಿಪ್ರಾಯ ರೂಪಿಸಲು ಸಂಚು ಮಾಡುವುದುಂಟು. ಕರ್ನಾಟಿಗರು ಉಳಿದ ಕೆಲವು ರಾಜ್ಯಗಳವರಂತೆ ಚಲನಚಿತ್ರ ತಾರೆಯರ ಆರಾಧಕರಲ್ಲ, ಭಾಷಾಂಧತೆಯಿಂದ ಮತ್ತೇರುವವರೂ ಅಲ್ಲ, ಅಥವಾ ಜನಾಂಗೀಯ ಭೇದದ ಹೆಸರಿನಲ್ಲಿ ಬಡಿದಾಡುವವರೂ ಅಲ್ಲ; ಪ್ರಜ್ಞಾವಂತಿಕೆಯಿಂದ ಕೂಡಿರುವವರು ಎಂಬುದು ನಿಜವಿದ್ದರೂ ಇವರು ಎಚ್ಚರಗೊಳ್ಳುವುದರಲ್ಲೇ ಬಹಳ ನಿಧಾನ ಗತಿಯವರು ಎಂಬುದು ಸ್ಪಷ್ಟ ಸತ್ಯ. ಆದ್ದರಿಂದ ಕನ್ನಡಿಗರ ಈ ಮೂಲಭೂತ ದೋಷವನ್ನರಿತು ಜಾಗೃತ ಚೇತನರಾದ ಕೆಲವರು ಇನ್ನೂ ಎಚ್ಚರಗೊಳ್ಳದವರನ್ನು ಎಬ್ಬಿಸಲು ಕಾರ್ಯೋನ್ಮುಖವಾಗಬೇಕಾದುದು ತೀರಾ ಅಗತ್ಯವಿದೆ.

ಸೂಕ್ತ ಮತ್ತು ಸುವರ್ಣ ಅವಕಾಶ

ಹದನದಲಿ ಆರಂಬ ಕದನದಲಿ ಕೂರಂಬ
ನದಿಯ ಹಾಯುವಲ್ಲಿ ಹರಿಗೋಲ ಮರೆದವರು
ವಿಧಿಯ ಬೈದೇನೋ ಸರ್ವಜ್ಞ?

ಭೂಮಿ ಹಸಿಯಾಗುವಂತೆ ಮಳೆ ಬಿದ್ದಾಗ ರೈತನು ಆರಂಬವನ್ನು ಅರ್ಥಾತ್ ಒಕ್ಕಲುತನವನ್ನು ಸಕಾಲದಲ್ಲಿ ಆರಂಭಿಸಬೇಕು. ಯುದ್ಧ ಭೂಮಿಗೆ ಹೊರಟವನು ಮರೆಯದೆ ಆಯುಧವನ್ನು ಒಯ್ಯಬೇಕು. ನದಿ ದಾಟಬೇಕೆನ್ನುವವನು ನಾವೆಯನ್ನು ಮತ್ತು ಹುಟ್ಟು ಹಾಕುವ ಕೋಲನ್ನು ಒಯ್ಯಬೇಕು. ಅಗತ್ಯವಿದ್ದಾಗ ಇವನ್ನು ಮರೆತು ನಂತರ ನನ್ನ ಅದೃಷ್ಟ ಚೆನ್ನಾಗಿಲ್ಲ ಎಂದು ಹಲುಬುವುದರಲ್ಲಿ ಅರ್ಥವೇನಿದೆ ? ದರಿದ್ರ ವಿಧಿ ಎಂದು ವಿಧಿಯನ್ನು ಬಯ್ಯುವುದರಲ್ಲಿ ಪ್ರಯೋಜನವೇನಿದೆ ? ಅಶಿಕ್ಷಿತರಾದ ಮತದಾರರು ತಿಳುವಳಿಕೆಯಿಲ್ಲದೆ ಅಲ್ಪ ಆಕಾಂಕ್ಷೆ, ಆಮಿಷಕ್ಕೆ ಬಲಿಯಾಗಿ ನೋಟಿಗಾಗಿ, ಸಾರಾಯಿಗಾಗಿ ಮತವನ್ನು ಮಾರಿಕೊಂಡರೆ ಸುಶಿಕ್ಷಿತರು ವ್ಯಂಗ್ಯೋಕ್ತಿಗಳನ್ನಾಡುತ್ತ ಮನೆಯಲ್ಲಿ ಕುಳಿತು ಹರಟೆ ಹೊಡೆಯುವುದುಂಟು. ಹೀಗಾಗಿ ಆಯ್ಕೆ ಮಾಡಬೇಕಾದ ಪ್ರಜ್ಞಾವಂತರ ಬೆಂಬಲ ಪಡೆಯದೆ, ಮತದ ಮೌಲ್ಯವನ್ನೇ ಅರಿಯದೆ ಕ್ಷುಲ್ಲಕ ಆಸೆ-ಆಮಿಷಕ್ಕೆ ಓಟು ಮಾರಿಕೊಳ್ಳುವ ಅಜ್ಞ ಜನರ ಬೆಂಬಲದಿಂದ ಅನೇಕ ಅಭ್ಯರ್ಥಿಗಳು ಆರಿಸಿಬರುವ ಸಂಭವವೇ ಹೆಚ್ಚು. ಚುನಾವಣೆ ಒಂದು ಅಕ್ರಮ ದಂಧೆಯಂತಾಗಿದ್ದು ಹಣವನ್ನು ಚೆಲ್ಲಿ ಅಧಿಕಾರ ಪಡೆದು ಆಯ್ಕೆಯಾಗಿ ಅಧಿಕಾರ ಪಡೆದ ನಂತರ ಒಂದಕ್ಕೆ ಹತ್ತರಷ್ಟು ನೂರರಷ್ಟು ಹಣವನ್ನು ಬಾಚಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಸಮಾಜ ಸೇವೆ ಎಂಬ ಮೌಲ್ಯ ಹುಡುಕಿದರೂ ಸಿಗಲಾರದಷ್ಟು ಕಡಿಮೆಯಾಗಿದೆ. ಹಣದ ಜೊತೆಗೆ ದೌರ್ಜನ್ಯ-ಹಿಂಸೆಗಳೂ ಸೇರಿ ಕೆಲವು ಕಡೆ ವಾತಾವರಣವೇ ಭಯಗ್ರಸ್ತವಾಗಿದೆ. ಪ್ರಜಾಪ್ರಭುತ್ವದ ವ್ಯಾಖ್ಯಾನವನ್ನು ಅಬ್ರಹಾಂ ಲಿಂಕನ್ ಹೀಗೆ ವಿವರಿಸಿದರು By the people, for the people and of the people ಆದರೆ ಇಂದು ಆಗಿರುವುದೇನು ? ಪ್ರಜಾಪ್ರಭುತ್ವವೆಂದರೆ ಜನರಿಂದ, ಜನರಿಗಾಗಿ, ಜನರು ನಡೆಸುವ ಆಳ್ವಿಕೆ ಎಂಬುದು ವಿಕೃತಗೊಂಡು Buy the people, far the people and off the people ಜನರನ್ನು ಖರೀದಿಸುವ, ಜನತೆಯಿಂದ ದೂರವಾದ ಜನತೆಗೆ ಲಭ್ಯವಾಗದ, ಆಳ್ವಿಕೆ ಎಂದು ಬಣ್ಣಿಸುವಂತಾಗಿದೆ.

ಇಂಥ ಮೌಲ್ಯರಹಿತ ರಾಜಕಾರಣ ಕಂಡು ಬೇಸರಗೊಂಡು ರಾಜಕೀಯ ನಿವೃತ್ತಿ ಪಡೆಯಬೇಕು ಎಂದು ಬಿ.ಜೆ.ಪಿಯಿಂದ ಹೊರಬಂದ ಯಶಸ್ವಿ ಉದ್ಯಮಿ ಶ್ರೀ ವಿಜಯ ಸಂಕೇಶ್ವರ ಅವರು ಮನಸ್ಸು ಬದಲಿಸಿ, ಕರ್ನಾಟಕದ ಸರ್ವಾಂಗೀಣ ಏಳಿಗೆಗಾಗಿ ಕನ್ನಡ ನಾಡು ಪಾರ್ಟಿಯನ್ನು ಕಟ್ಟಿದ್ದು ಅಭಿನಂದನಾರ್ಹ ಪ್ರಯತ್ನ. ಅಬ್ರಹಾಂ ಲಿಂಕನ್ ಹೇಳುವಂತೆ ಬುಲೆಟ್‌ನಿಂದ ಸಾಧಿಸಲಾಗದುದನ್ನು ಬ್ಯಾಲೆಟ್(ಮತ ಪತ್ರ)ನಿಂದ ಸಾಧಿಸಲು ಸಾಧ್ಯವಾಗುತ್ತದೆ. ವ್ಯವಸ್ಥೆ ಕೆಟ್ಟು ಹೋದಾಗ ಬದಲೀ ವ್ಯವಸ್ಥೆಯನ್ನು ತಂದು ಕೆಟ್ಟಿರುವ ವ್ಯವಸ್ಥೆಯನ್ನು ಸರಿಪಡಿಸಬೇಕಾಗುತ್ತದಲ್ಲವೆ? ರೂಢಿಗೊಂಡ ವ್ಯವಸ್ಥೆಯ ದುಃಸ್ಥಿತಿ ನೋಡಿದರೆ ಇದನ್ನು ಸರಿಪಡಿಸಲು ಸಾಧ್ಯವೆ? ಎಂಬ ನಿರಾಶೆಯು ಧ್ಯೇಯವಾದಿಗಳನ್ನು ಕಾಡುವುದಾದರೂ ಬಲಿಷ್ಠ ಶತ್ರುಗಳಾಗಿದ್ದ ಬ್ರಿಟಿಷರನ್ನೇ ತೊಲಗಿಸಿ

ಸ್ವಾತಂತ್ರ್ಯವನ್ನು ಪಡೆದ ಭಾರತೀಯರು ಈಗ ನಿದ್ರಾವಸ್ಥೆಯಲ್ಲಿ ಇದ್ದರೂ ಅವರು ಎಚ್ಚರಗೊಂಡರೆ, ದೃಢ ಸಂಕಲ್ಪ ಮಾಡಿದರೆ ವಿಧಾಯಕ ಬದಲಾವಣೆ ಏಕೆ ಅಸಾಧ್ಯ? ಎಂಬ ಆಸೆ ಮಿಂಚುತ್ತದೆ.

ಕನ್ನಡ ನಾಡು ಪಕ್ಷಕ್ಕೆ ಉಜ್ವಲ ಭವಿಷ್ಯ

ಮಾನವನಿಗೆ ದೇಹದೊಳಗಣ ಅಸ್ಥಿಪಂಜರ ಎಷ್ಟು ಮುಖ್ಯವೋ ಹಾಗೆ ಪಕ್ಷಕ್ಕೆ ಒಂದು ಸಿದ್ಧಾಂತ ಮುಖ್ಯ. ಆ ಸಿದ್ಧಾಂತವೇ ಧ್ಯೇಯವನ್ನು ಗುರುತಿಸುತ್ತದೆ ಮತ್ತು ಧ್ಯೇಯವನ್ನು ಸಾಕಾರಗೊಳಿಸುವ ಉತ್ತಮ ಸಾಧನವನ್ನೂ ಒದಗಿಸುತ್ತದೆ. ದೂರದೃಷ್ಟಿಯ, ವಾಸ್ತವ ವಾದಿತ್ವದಿಂದ ಕೂಡಿದ, ಕ್ರಿಯಾಶೀಲ ಸ್ವಭಾವದ ಯಶಸ್ವಿ ಉದ್ಯಮಿ ಸಂಕೇಶ್ವರ ಅವರು ಕರ್ನಾಟಕದ ಸರ್ವಾಂಗೀಣ ಬೆಳವಣಿಗೆಯ ದೃಷ್ಟಿಯಿಂದಲೇ ಸಂಸ್ಥಾಪಿಸಿರುವ ಕನ್ನಡ ನಾಡು ಪಕ್ಷವು ಕರ್ನಾಟಕಕ್ಕೆ ಕಲ್ಪವೃಕ್ಷ. ಇದನ್ನು ಬೆಳೆಸುವ ಹೊಣೆಗಾರಿಕೆ ಕೇವಲ ವಿಜಯ ಸಂಕೇಶ್ವರರ ಮೇಲಿಲ್ಲ; ಪಕ್ಷದ ಕಾರ್ಯಕರ್ತರಿಗೆ ಮಾತ್ರ ಹೊರಿಸಲ್ಪಟ್ಟ ಹೊಣೆಯಲ್ಲ; ಈ ಜವಾಬ್ದಾರಿ ಸಮಸ್ತ ಕರ್ನಾಟಿಗರದು. ಕೇವಲ 10 ತಿಂಗಳಿನ ಶಿಶುವಾಗಿರುವ ಪಕ್ಷ ಅಂಬೆಗಾಲಿಡಬೇಕಾದಂತಹುದು ಎದ್ದು ನಿಂತು ಓಡುವಂತೆ 14ನೆಯ ಮಹಾಚುನಾವಣೆಯಲ್ಲಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ 21ರಲ್ಲಿ ಮತ್ತು 224 ವಿಧಾನಸಭಾ ಕ್ಷೇತ್ರಗಳ ಪೈಕಿ 193ರಲ್ಲಿ ಸ್ಪರ್ಧಾಳುಗಳನ್ನು ನಿಲ್ಲಿಸಲು ಸಮರ್ಥವಾಗಿರುವುದು ಇಡೀ ರಾಜ್ಯದ ಜನತೆಯನ್ನು ನಿಬ್ಬೆರಗಾಗಿಸಿದೆ. ಸರ್ವಧರ್ಮ ಸಾಮರಸ್ಯ, ದೇಶಪ್ರೇಮ, ಕಾಯಕಶೀಲ ಸಮಾಜ ರಚನೆಯ ಹಂಬಲ, ರಾಜ್ಯ-ರಾಷ್ಟ್ರಗಳ ಸರ್ವಾಂಗೀಣ ಅಭಿವೃದ್ಧಿ-ಮುಂತಾದ ಉದಾತ್ತ ಧ್ಯೇಯ ಉಳ್ಳ ಕನ್ನಡ ನಾಡು ಪಾರ್ಟಿಯ ಅಭ್ಯರ್ಥಿಗಳನ್ನು ಬಹುಮತದಿಂದ ಆರಿಸಿ, ಲೋಕಸಭೆ, ವಿಧಾನಸಭೆಗೆ ಕಳಿಸಿ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳುವ ಹೊಣೆಗಾರಿಕೆ ಕರ್ನಾಟಕದ ಜನತೆಯ ಮೇಲೆ ಇದೆ.

ಅನುಭವ ಮಂಟಪಕ್ಕೆ ಸ್ವಾಗತ

- ಮಾತೆ ಕಸ್ತೂರಿದೇವಿ

ಭಾವ ಭ್ರಮೆವಂತರು ಬಾರದಿರಿ
ಜ್ಞಾನಹೀನರೇ ಬೇಗ ಹೋಗಿ
ತ್ರಿವಿಧಮಲಕ್ಕೆ ಕಚ್ಚಿಮುಚ್ಚಿ ಹೊಡೆದಾಡುವರತ್ತಲಿರಿ
ನಿರುತ ಸ್ವಯಾನುಭವರು ಬನ್ನಿ
ಪರಬ್ರಹ್ಮ ಸ್ವರೂಪರು ಬನ್ನಿ
ಏಕಲಿಂಗ ನಿಷ್ಠಾಪರ ದೃಢವಂತರು ಬನ್ನಿ
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ ಎಂದು ಎನಗೆ
ಕೊಟ್ಟ ಕಾಯಕ ಕೂಡಲಸಂಗಮದೇವರಲ್ಲಿ ಬಸವಣ್ಣ

- ಉಗ್ಘಡಿಸುವ ಕಾಯಕದ ಬಿಬ್ಬಿದೇವಯ್ಯನವರು

ಇದು ಹನ್ನೆರಡನೆಯ ಶತಮಾನದ ಜಗತ್ಪ್ರಸಿದ್ಧವಾದ "ಅನುಭವ ಮಂಟಪ" ಎಂಬ ಪರಿಪೂರ್ಣವಾದ ಆಧ್ಯಾತ್ಮಿಕ ವಿಶ್ವವಿದ್ಯಾಲಯದ ಶರಣರಾದ ಬಿಬ್ಬಿ(ಗಬ್ಬಿ)ದೇವಯ್ಯನವರು

ರಚಿಸಿರುವ ವಚನ. ತಮ್ಮ ವಚನದ ಕೊನೆ ಸಾಲಿನಲ್ಲಿ ಅವರೇ ಹೇಳಿಕೊಂಡಿರುವಂತೆ ಅನುಭವ ಮಂಟಪದ ಮೂಲ ಸಂಸ್ಥಾಪಕರೂ, ನೇತಾರರೂ ಆಗಿದ್ದ ಧರ್ಮಪಿತ ಬಸವಣ್ಣನವರು ಮಂಟಪಕ್ಕೆ ಬಂದ ಶರಣರನ್ನು ಸ್ವಾಗತಿಸಲೆಂದು ಇವರನ್ನು ನೇಮಿಸಿಕೊಂಡಿದ್ದರು. ಅಂದರೆ ಈಗಲೂ ಬೃಹತ್ತಾದ ವಾಣಿಜ್ಯ ಸಂಸ್ಥೆಗಳು, ಆಸ್ಪತ್ರೆಗಳು ಮುಂತಾದ ಕಡೆ ಸ್ವಾಗತಕಾರರಾಗಿ (Receptionist) ಕೆಲಸ ಮಾಡುವವರನ್ನು ಕಾಣಬಹುದು. ಅವರ ಕೆಲಸವೇನೆಂದರೆ ಬರುವವರನ್ನು ನಗುಮುಖದಿಂದ ಸ್ವಾಗತಿಸಿ, ನಯವಿನಯದಿಂದ ಮಾತಾಡಿಸಿ, ಅಗತ್ಯವಿರುವ ಮಾಹಿತಿಗಳನ್ನು ನೀಡುವ ಮೂಲಕ ಸಂದರ್ಶಕರಲ್ಲಿ ಸಂಸ್ಥೆಗಳ ಧ್ಯೇಯೋದ್ದೇಶಗಳ ಬಗ್ಗೆ ಸದಭಿಪ್ರಾಯ, ಅಭಿಮಾನ ಹುಟ್ಟುವಂತೆ ಮಾಡುವುದು. ಇಂಥ ಮಹತ್ವಪೂರ್ಣವಾದ ಕಾಯಕವನ್ನು ಶರಣ ಗಬ್ಬಿದೇವಯ್ಯನವರು ಭಕ್ತಿ-ಶ್ರದ್ಧೆ-ನಿಷ್ಠೆಗಳಿಂದ ಮಾಡುತ್ತಾ ಕುತೂಹಲದಿಂದಲೂ, ಭಕ್ತಿಯಿಂದಲೂ ಪೂರ್ವಾಗ್ರಹ ಪೀಡಿತ ಮನೋಭಾವದಿಂದಲೋ ಬಂದವರಿಗೆ ಸ್ವಾಗತ ಬಯಸುತ್ತಾ ತಮ್ಮ ವಚನದಲ್ಲಿ ಸವಾಲು ಮತ್ತು ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಇಂದಿನ ಸಮಾಜದಲ್ಲಿ ಹಲವಾರು ರೀತಿಯ ಸಂಘ ಸಂಸ್ಥೆಗಳನ್ನು ಕಾಣುತ್ತೇವೆ. ಕೇವಲ ಆಧ್ಯಾತ್ಮಿಕ, ಧಾರ್ಮಿಕ ಚಟುವಟಿಕೆಗಳಾದ ಭಜನೆ, ಪ್ರಾರ್ಥನೆ, ಪ್ರವಚನ, ಹೋಮ-ಹವನ, ಪೂಜೆ, ಜಪ, ಯೋಗ ಎಂದು ಕಾಲಹರಣ ಮಾಡುವ ಮಠ, ಆಶ್ರಮ, ಗುಡಿಗುಂಡಾರ, ಕುಟೀರಗಳಿಗೆ ಲೆಕ್ಕವಿಲ್ಲ. "ಸೇವೆಯೇ ದೇವರು" ಎಂದು ಬೋರ್ಡು ಹಾಕಿಕೊಂಡು ಸಮಾಜ ಸೇವೆಯ ಹೆಸರಿನಲ್ಲಿ ಅನಾಥಾಶ್ರಮಗಳು, ಅಬಲಾಶ್ರಮಗಳು, ಸೇವಾಶ್ರಮಗಳು ಕಂಡು ಬರುತ್ತವೆ. ಸಮಾಜದಲ್ಲಿ ಮನ್ನಣೆ ಪಡೆಯಲು, ಬಿರುದು ಬಾವಲಿ, ಪ್ರಶಸ್ತಿಗಳನ್ನು ಗಳಿಸಲು, ಸರಕಾರದಿಂದ ಧನ ಸಹಾಯ ಪಡೆಯಲು ಇದು ಸುಲಭಮಾರ್ಗವೆಂದು ಭಾವಿಸಿದ ಇಂಥ ಸಂಸ್ಥೆಗಳು ಸಮಾಜ ಸುಧಾರಣೆಯ ಬಗ್ಗೆ ಎಂದಿಗೂ ತಲೆಕೆಡಿಸಿಕೊಳ್ಳುವುದಿಲ್ಲ. ಬದಲಿಗೆ ಕೆಲವೊಮ್ಮೆ ಶೋಷಣೆಯ ಕೇಂದ್ರಗಳಾಗುವುದು ಉಂಟು.

ಇನ್ನು ಕೆಲವು ಸಂಸ್ಥೆಗಳುಂಟು. ಇವು ಏಕ ವ್ಯಕ್ತಿ ಆಧಾರಿತ, ಏಕ ಸ್ವಾಮಿತ್ವಕ್ಕೆ ಒಳಪಟ್ಟ ಸಂಸ್ಥೆಗಳು. ಇವರು ತಮ್ಮ ಅಮೂಲ್ಯವಾದ ತನು ಮನ ಆತ್ಮಶಕ್ತಿಗಳನ್ನು ಬಳಸಿ ವೈಯಕ್ತಿಕ ಕೀರ್ತಿಯನ್ನು ಸಮಾಜದಲ್ಲಿ ನೆಲೆಗೊಳಿಸಲೆಂದೇ ತಮ್ಮ ಹೆಸರಿನ ಶಾಲೆ, ಕಾಲೇಜು, ಆಸ್ಪತ್ರೆ, ಕಲ್ಯಾಣ ಮಂಟಪ, ವಸತಿಗೃಹ ಮುಂತಾದ ಸ್ಥಾವರಗಳನ್ನು ಕೋಟ್ಯಾಂತರ ರೂ.ಗಳ ವೆಚ್ಚದಲ್ಲಿ ನಿರ್ಮಿಸುತ್ತಾರೆ. ಇಂಥಲ್ಲಿ ನಡೆಯುವ ಯಾವುದೇ ಆಧ್ಯಾತ್ಮಿಕ, ಸಾಮಾಜಿಕ, ಕಾರ್ಯಕ್ರಮಗಳಾಗಲಿ ಅವೆಲ್ಲಾ ಆ ವ್ಯಕ್ತಿಯ ಕೀರ್ತಿಯನ್ನು ವಿಸ್ತರಿಸಲೆಂದೇ ಯೋಜಿಸಲ್ಪಟ್ಟಿರುತ್ತವೆ. ಬೌದ್ಧಿಕ ಪ್ರಾಮಾಣಿಕತೆಯಿಲ್ಲದ ಇಂಥವರನ್ನು ಕುರಿತೇ ಬಸವಣ್ಣನವರು "ನಿಮ್ಮನರಿಯದ ಅವಗುಣಿಗಳ ತೋರದಿರಯ್ಯ" ಎಂದು ಮೊರೆಯಿಡುವುದು. ಇಷ್ಟೇ ಅಲ್ಲ ಯಾವ ಧ್ಯೇಯ ಉದ್ದೇಶಗಳೂ ಇಲ್ಲದ ಸಂಸ್ಥೆಗಳು ಸಾಕಷ್ಟು ಇವೆ. ಮಾತ್ರವಲ್ಲ ಎಲೆ ಮರೆಯ ಕಾಯಿಯಂತೆ, ಪ್ರಚಾರ ಬಯಸದ, ಸಮಾಜದ ಉನ್ನತಿಗಾಗಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಸಂಸ್ಥೆಗಳೂ ಇವೆ. ಆದರೆ ಅವುಗಳನ್ನು ಕುರಿತು ಚರ್ಚಿಸುವುದು ಈ ಲೇಖನದ ಉದ್ದೇಶವಲ್ಲ. ಈಗ ವಿಷಯಕ್ಕೆ ಬರೋಣ.

ಆಧುನಿಕ ಬಸವಯುಗ ನಿರ್ಮಾಪಕರಾದ, ಪ್ರವಚನ ಪಿತಾಮಹರೆನಿಸಿದ್ದ ಪೂಜ್ಯ ಶ್ರೀ ಲಿಂ. ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ಮಾತುಗಳಲ್ಲಿ ಅನುಭವ ಮಂಟಪದ ಮಹತಿಯನ್ನು ಕೇಳೋಣ. "ಜಗದ್ವಂದ್ಯರಾದ ವಿಶ್ವಗುರು ಬಸವಣ್ಣನವರು ತಮ್ಮ ಹೃದಯದಲ್ಲಿ ಮೂಡಿದ ವಿಶ್ವಧರ್ಮದ ಉನ್ನತ ತತ್ತ್ವಗಳಿಗೆ ಸಾರ್ವತ್ರಿಕ, ಕ್ರಿಯಾತ್ಮಕ ಸ್ವರೂಪ ಕೊಡಬೇಕೆಂಬ ಮಹದುದ್ದೇಶದಿಂದ ಅನುಭವ ಮಂಟಪವೆಂಬ ಆಧ್ಯಾತ್ಮ ವಿಶ್ವವಿದ್ಯಾಲಯವನ್ನು ಕಟ್ಟಿದರು. ಮಾತು, ಮನ, ತರ್ಕಜ್ಞಾನಕ್ಕತೀತನಾದ ಪರಾತ್ಪರ ಪರವಸ್ತು ಪರಮಾತ್ಮನನ್ನು ಅಂಗಕ್ಕಳವಡಿಸಿಕೊಳ್ಳಬೇಕಾದರೆ ಅನುಭಾವದಿಂದಲೇ ಸಾಧ್ಯ ಎಂದು ಮನಗಂಡ ಬಸವಣ್ಣನವರು ತಮ್ಮ ಆಧ್ಯಾತ್ಮ ವಿದ್ಯಾಲಯಕ್ಕೆ "ಅನುಭವ ಮಂಟಪ" ಎಂದು ಹೆಸರಿಟ್ಟರು. ದೇಹ ಪರಿಶ್ರಮದ ಬಗ್ಗೆ ಗೌರವವಿಲ್ಲದೆ, ಕೇವಲ ತಲೆಯನ್ನು ದೊಡ್ಡದನ್ನಾಗಿ ಮಾಡಿ ಹೃದಯವನ್ನು ಕಿರಿದಾಗಿಸುವ ಶುಷ್ಕ ಶಿಕ್ಷಣವನ್ನು ನೀಡುವ ಇಂದಿನ ವಿಶ್ವವಿದ್ಯಾಲಯಗಳು ಅನುಭವ ಮಂಟಪದಂಥ ಉದಾತ್ತ ಸಂಸ್ಥೆಗೆ ಹೋಲಿಕೆ ಅನುಭವ ಮಂಟಪವು ಕೇವಲ ಜ್ಞಾನ ಪಾಂಡಿತ್ಯಗಳಿಂದ ಕೂಡಿ ಕೊಬ್ಬಿದ ಶುಷ್ಕ ಪಂಡಿತರ ವಾದದ ಸಂತೆಯಾಗಿರದೆ, ಸಜೀವ ಸಾಧಕರ ಪ್ರಯೋಗ ಕ್ಷೇತ್ರವಾಗಿತ್ತು. ಕಾಯಕ ಜೀವಿಗಳ ಕರುಣದ ಕೂಟವಾಗಿತ್ತು. ಮಹಾಜ್ಞಾನಿಗಳ ತತ್ತ್ವಜ್ಞಾನ ಸಮ್ಮೇಳನವಾಗಿತ್ತು". ಅನುಭವ ಮಂಟಪ ಮತ್ತು ಅದರ ಮುಂದೆ ಇತರೆ ಸಂಸ್ಥೆಗಳ ಕಾರ್ಯವಿಸ್ತಾರವನ್ನು ಒಂದು ಹೋಲಿಕೆಯೊಡನೆ ಸ್ಪಷ್ಟಪಡಿಸಬಹುದು. ಅನುಭವ ಮಂಟಪವು ಭೂಮಿಯನ್ನೇ (ಪರಮಾತ್ಮನನ್ನು) ಆಧಾರವಾಗಿಟ್ಟುಕೊಂಡು ಬೆಳೆದ ಬೃಹತ್ ಮಾವಿನ ಮರದಂತೆ, ಹಸಿದವರಿಗೆ ಸವಿಯಾದ ಹಣ್ಣನ್ನು ಕೊಡಬಲ್ಲುದು, ದಣಿದು ಬಂದವರಿಗೆ ನೆರಳನ್ನು- ಆಶ್ರಯವನ್ನು ಒದಗಿಸಬಲ್ಲುದು. ಇತರ ಸಂಸ್ಥೆಗಳು ಮಣ್ಣಿನ ಕುಂಡಗಳಲ್ಲಿ ಬೆಳೆಸಿದ ಗಿಡಗಳಂತೆ ಕೇವಲ ಕಣ್ಣಿಗೆ ಅಲಂಕಾರವಾಗಿ ಶೋಭಿಸುವುದೇ ವಿನಾ ಅನ್ನವನ್ನು ಆಶ್ರಯವನ್ನು ಒದಗಿಸಲಾರವು. ಇಂಥ ಅನುಭವ ಮಂಟಪಕ್ಕೆ ಬರಲು ಯಾರ್ಯಾರಿಗೆ ಅವಕಾಶವಿತ್ತು ಎಂಬುದನ್ನು ಈಗ ನೋಡೋಣ.

ಭಾವ ಭ್ರಮೆವಂತರು ಬಾರದಿರಿ ಎಂದು ಕರೆಯುವಲ್ಲಿ ಆಗ್ರಹ ಕಂಡು ಬರುತ್ತಿದೆ. ಅಂದರೆ ಬರದೆ ಇರಬೇಡಿ ನೀವೂ ಬನ್ನಿ ಎಂದು ಕೂಗುತ್ತಿದ್ದಾರೆ (ಉಗ್ಘಡಿಸುತ್ತಿದ್ದಾರೆ). ಹಾಗಾದರೆ ಮೊದಲು ಯಾರು ಬರಬೇಕು? ಭಾವ ಭ್ರಮೆವಂತರು. ಭಾವವೆಂದರೆ ಶುದ್ಧವಾದ ಇರುವಿಕೆ. ಜೀವಾತ್ಮ ಮತ್ತು ಪರಮಾತ್ಮರ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ಕಳೆದುಕೊಳ್ಳಲಿಕ್ಕಾಗಿ ನೀವು ಇಲ್ಲಿಗೆ ಬರಬೇಕು. ಏಕೆಂದು ಶರಣರ ಕೆಲವು ವಚನಗಳಲ್ಲಿ ನೋಡೋಣ:

★ ಭಾವ ಶಸ್ತ್ರದಿಂದ ಲಿಂಗದೇವನನ್ನು ಗೆಲಿದುಕೊಂಡು ಬನ್ನಿ

★ ಭಾವ ಶುದ್ಧ ಪೂಜೆಯ ಮಾಡುವೆ

★ ಭಾವ ಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು — ಧರ್ಮಪಿತರು

★ ಭಾವದ ಮರೆಯ ಬ್ರಹ್ಮವಾಗಿಪ್ಪ
ಚನ್ನಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು — ಅಕ್ಕಮಹಾದೇವಿ

★ ಭಾವದಿಂದ ಪ್ರಮಾಣಿಸುವುದೇ ಏಕರೂಪು
ಗುಹೇಶ್ವರ ಲಿಂಗವು ತಾನೆ — ಅಲ್ಲಮಪ್ರಭುದೇವರು

ಕಣ್ಣಿಗೆ ಕಾಣದಂತೆ, ಕೈಗೆ ಸಿಗದಂತೆ, ಭೂಮಿಯಲ್ಲಿ ಹುದುಗಿರುವ ನಿಧಿಯಂತೆ, ನಮ್ಮೊಳಗೆ ಬಚ್ಚಿಟ್ಟು ಕೊಂಡಿರುವ ದೇವರನ್ನು ಹುಡುಕಿಕೊಂಡು ಗುಡಿ ಗುಂಡಾರ, ತೀರ್ಥ ಕ್ಷೇತ್ರಗಳಿಗೆ ಹೋಗಬೇಡಿ, ಬಳಲಬೇಡಿ. ಅಗೋಚರನೂ, ಅಪ್ರಮಾಣನು ಆದ ಪರಮಾತ್ಮನನ್ನು ಅರಿಯಲು ಅನುಭವದಿಂದ ಮಾತ್ರ ಸಾಧ್ಯ ಎಂಬುದನ್ನು ಮನಗಾಣಲು ನೀವು ಇಲ್ಲಿಗೆ ಬನ್ನಿರಿ.

ಮುಂದೆ ಜ್ಞಾನಹೀನರೇ ಬೇಗ ಒಳಗೆ ಹೋಗಿ ಎಂದು ಅವಸರಪಡಿಸುತ್ತಿದ್ದಾರೆ. ಯಾವ ಜ್ಞಾನದಲ್ಲಿ ಹೀನರಾದವರು ಇಲ್ಲಿಗೆ ಬರಬೇಕು ? ಪರಮಾತ್ಮನನ್ನು ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ಎಂದು ದಾರ್ಶನಿಕರು ಗುರುತಿಸುತ್ತಾರೆ. ಅದರಲ್ಲಿ ಪರಮಾತ್ಮನ ಒಂದು ಲಕ್ಷಣವಾದ ಚಿತ್ ಅಂದರೆ ಜ್ಞಾನಸ್ವರೂಪನು ಎಂದು, ಇಂಥ ಜ್ಞಾನ ಸ್ವರೂಪಿಯನ್ನು ತಿಳಿಯುವಲ್ಲಿ ಹಿಂದೆ ಉಳಿದವರು, ಬೇಗ ಮುಂದೆ ಬಂದು, ಒಳಗೆ ಹೋಗಿ ಎನ್ನುತ್ತಿದ್ದಾರೆ. ಏಕೆ ಹೀಗೆ ?

★ ನೀವು ಅರಿವಾಗಿ ಮುಂದುದೋರಿದ ಕಾರಣ
ನಿಮ್ಮಿಂದಲೇ ನಿಮ್ಮನರಿವೆ

★ ನಿಮ್ಮಿಂದಧಿಕನಾರನೂ ಕಾಣೆನಯ್ಯಾ
ಲಿಂಗದೇವಾ ನೀವು ಜ್ಞಾನ ಗುರುವಾದ ಕಾರಣ — ಬಸವಣ್ಣನವರು

★ ಮನದ ಭಂಗವ ಅರಿವಿನ ಮುಖದಿಂದ ಗೆಲಿದೆ — ಅಕ್ಕಮಹಾದೇವಿ

★ ಅರಿವನೆ ಮರೆತು ಉರುಹಸೆ ಪ್ರಾ[illegible]
ಹೆಡ್ಡರ ನೋಡಾ ಗುಹೇಶ್ವರಾ — ಅಲ್ಲಮಪ್ರಭು ದೇವರು

★ ಅರಿವಿನ ಬೆಳಕನು ಪಥದಲಿ ಚೆಲ್ಲುತ
ಮುಂದಡಿ ಇಡಿಸುವ ಗುರು ನೀನು — ಪೂಜ್ಯ ಮಾತಾಜಿ

ಮೇಲೆ ಪ್ರತಿಪಾದಿಸಿರುವಂತೆ ಎಲ್ಲಾ ಜ್ಞಾನವೂ ಯಾವ ಮೂಲಚೈತನ್ಯ ಜ್ಞಾನ ಸ್ವರೂಪಿಯಾದ ಪರಮಾತ್ಮನಿಂದ ಹೊರಹೊಮ್ಮುತ್ತಿದೆಯೋ ಮತ್ತು ಎಲ್ಲಕ್ಕೂ ಮೂಲ ಕಾರಣಕರ್ತನಾಗಿದ್ದಾನೋ ಅಂಥ ಸಚ್ಚಿದಾನಂದ ಸ್ವರೂಪ ಸೃಷ್ಟಿಕರ್ತನನ್ನು ಅರಿಯಲು ಬೇಗ ಬನ್ನಿರಿ ಎಂದು ಕೈ ಬೀಸಿ ಕರೆಯುತ್ತಿದ್ದಾರೆ.

ತ್ರಿವಿಧ ಮಲಕ್ಕೆ ಕಚ್ಚಿಮುಚ್ಚಿ ಹೊಡೆದಾಡುವರತ್ತಲಿರಿ. ಬಿಬ್ಬಿದೇವಯ್ಯನವರು ಉದಾರ ಮನಸ್ಸಿನಿಂದ ಎಲ್ಲಾ ರೀತಿಯ ಮುಗ್ಧರನ್ನು, ಅಜ್ಞಾನಿಗಳನ್ನು ಸ್ವಾಗತಿಸಿದರೂ, ಒಂದು ವರ್ಗದವರನ್ನು ಮಾತ್ರ ಮುನ್ನೆಚ್ಚರಿಕೆಯಿಂದ 'ಅತ್ತಲಿರಿ' ಎಂದು ತಡೆಯುತ್ತಿದ್ದಾರೆ. ಅವರು ಯಾರಿರಬಹುದೆಂದು ಈಗ ನೋಡೋಣ. ಸ್ಥೂಲ-ಸೂಕ್ಷ್ಮ-ಕಾರಣ ಎಂಬ ಮೂರು ಶರೀರಗಳಲ್ಲಿ ಕ್ರಮವಾಗಿ ಅನಾಚಾರ-ಅಜ್ಞಾನ-ದುರ್ಭಾವನೆಗಳಿಂದ ಕಾರ್ಮಿಕ, ಮಾಯಾ, ಆಣವ ಮಲತ್ರಯ ಸಂಬಂಧವಾದಾಗ ಜೀವಾತ್ಮನು ಮತ್ತೆ ಮತ್ತೆ ಹುಟ್ಟು-ಸಾವುಗಳ ಜಂಜಡದಲ್ಲಿ ಸಿಕ್ಕಿ ಬೀಳುವನು. ಈ ಸತ್ಯವನ್ನು ಅರಿತುಕೊಂಡು ಭವ ಚಕ್ರದಿಂದ ಪಾರಾಗಲು ದೀಕ್ಷಾತ್ರಯದಿಂದ, ತನುತ್ರಯದಲ್ಲಿರುವ ಮಲತ್ರಯಗಳನ್ನು ಪರಿಹರಿಸಿಕೊಂಡು ಲಿಂಗತ್ರಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು

ಪ್ರಯತ್ನಿಸದೆ ತಮ್ಮ ದುರ್ಗುಣಗಳಿಂದ ಸಂಸ್ಥೆ-ಸಮಾಜಗಳನ್ನು ನಿರ್ಬಲಗೊಳಿಸುವವರು ಬರಬೇಡಿ ಎಂದು, ಅಂಥವರಿಗೆ ಪ್ರವೇಶವನ್ನು ನಿಷ್ಠುರವಾಗಿ ನಿರಾಕರಿಸುತ್ತಿದ್ದಾರೆ. ಮಾತ್ರವಲ್ಲ ನಿಮ್ಮಂಥವರಿಗೆ ಬೇಕಾದಷ್ಟು ಜಾಗಗಳಿವೆ ಅಲ್ಲಿಗೆ ಹೋಗಿರಿ ಎಂದು ಆದೇಶಿಸುತ್ತಿದ್ದಾರೆ. ಏಕೆಂದರೆ ಧರ್ಮಪಿತರು ತಮ್ಮ ವಚನಗಳಲ್ಲಿ ಇಂಥವರ ದುರ್ಬಲತೆಯನ್ನು ಹೀಗೆ ಮನಗಾಣಿಸುತ್ತಾರೆ

★ ಲಿಂಗದೇವನ ಶರಣರ ಅನುಭಾವ
ಭವದುಃಖಿಗಳಿಗೆ ವೇದ್ಯವಾಗದಯ್ಯ

★ ನರಕದಲ್ಲಿ ಬೀಳುವ ಕರ್ಮಿಗಳಿಗೆ
ಲಿಂಗದೇವನ ಶರಣರನುಭಾವ ನೆಲೆಗೊಳ್ಳದು.

ನಿರುತ ಸ್ವಯಾನುಭಾವರೇ ಬನ್ನಿ. ತನ್ನನ್ನು ತಾನು ಅರಿತುಕೊಂಡು ಕೇವಲ ವೈಯಕ್ತಿಕವಾದ ಆತ್ಮೋದ್ಧಾರದ ಹಂಬಲವನ್ನು ಮಾತ್ರ ಇಟ್ಟುಕೊಂಡು, ನಿರಂತರವಾದ ಆತ್ಮಾನಂದದಲ್ಲಿ ತಲ್ಲೀನರಾಗಬೇಕೆಂದು ಬಯಸುತ್ತಿರುವ ಅಲ್ಪಾಕಾಂಕ್ಷಿಗಳಾದ ಆಧ್ಯಾತ್ಮಜೀವಿಗಳೇ ನೀವು ಬನ್ನಿ. ನೀವು ಕಾಡು ಮೇಡು ಬೆಟ್ಟ ಗುಡ್ಡಗಳಂಥ ಏಕಾಂತ ಪ್ರದೇಶಗಳಲ್ಲಿ ಒಂಟಿಯಾಗಿದ್ದುಕೊಂಡು ಏನು ಸಾಧಿಸಬಲ್ಲಿರಿ ? ಶರಣರ ಸತ್ಸಂಗದಲ್ಲಿ ಬೆರೆತು ನಿಮ್ಮ ಸಾಧನೆಯನ್ನು ಮುಂದುವರಿಸಿದರೆ ಸಾಧನಾ ಪಥದಲ್ಲಿ ಗುರುಹಿರಿಯರ, ಅನುಭಾವಿಗಳ ಮಾರ್ಗದರ್ಶನದಲ್ಲಿ ಉಪಾಧಿಗಳಿಂದ ಪಾರಾಗಿ ಬೇಗ ಗುರಿ ಮುಟ್ಟಬಹುದು. ಇಲ್ಲದಿದ್ದರೆ ಸರಿ-ತಪ್ಪುಗಳ ಹಾದಿಯಲ್ಲಿ ತನಗೆ ತಿಳಿದಂತೆ ಅನುಷ್ಠಾನದಲ್ಲಿ ತೊಡಗುವುದನ್ನು ಶರಣರು ಈ ರೀತಿಯಾಗಿ ವಿಶದಿಸುತ್ತಿದ್ದಾರೆ

★ ಬೆರಳನೆಣಿಸಿ ಪರಮಾರ್ಥವ ಹಡೆವಡೆ ಚೋದ್ಯವಲ್ಲವೆ ? ಹೇಳಾ — ಧರ್ಮಪಿತರು

★ ಧ್ಯಾನ ಆಧ್ಯಾತ್ಮಿಕದಲ್ಲಿ ಕಂಡಹೆನೆಂಬುದು ಜೀವನಲ್ಲದೆ ಪರಮನಲ್ಲ
— ಅಲ್ಲಮಪ್ರಭು ದೇವರು

★ ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ ?
ನೆನೆದರಾಗದು, ನಿಜದಲ್ಲಿ ನಿರ್ಧರಿಸಿ ತಾನು ತಾನಾಗದನ್ನಕ್ಕ
— ಅಮುಗಿದೇವಯ್ಯ

ಪರಬ್ರಹ್ಮಸ್ವರೂಪರು ಬನ್ನಿ. ಬ್ರಹ್ಮಸತ್ಯ ಜಗನ್ಮಿಥ್ಯ. ಅಹಂ ಬ್ರಹ್ಮಾಸ್ಮಿ ಎಂಬ ಅದ್ವೈತವಾಕ್ಯಗಳಲ್ಲಿ ನಂಬಿಕೆಯಿಟ್ಟು ಆ ಸೃಷ್ಟಿಕರ್ತನಲ್ಲಿ ನಂಬಿಕೆ, ಶರಣಾಗತಿಯನ್ನು ಕಳೆದುಕೊಂಡು, ನಾನೇ ಬ್ರಹ್ಮ, ಜೀವ ಬ್ರಹ್ಮರಲ್ಲಿ ವ್ಯತ್ಯಾಸವಿಲ್ಲ 'ನಾನು ಅದುವೇ ಆಗಿರುವೆ' ಎಂದುಕೊಂಡು ಭ್ರಾಂತಿಗೆ ಒಳಗಾಗಬೇಡಿ. ಶರಣರೊಡನೆ ಬೆರೆತು ಅದ್ವೈತದ ಅಂತರಾರ್ಥವನ್ನು ಅರಿತು, ಅಹಂಕಾರಕ್ಕೆ ಬದಲು ದಾಸೋಹಂಭಾವವನ್ನು ಅಳವಡಿಸಿಕೊಂಡು ಕರ್ತನಿಗೆ ಶರಣಾಗಿ ಸದ್ಭಕ್ತರಾಗಲು ಇಲ್ಲಿಗೆ ಬನ್ನಿರಿ. ಏಕೆಂದರೆ ಈಗಾಗಲೇ ಈ ಸಿದ್ಧಾಂತವನ್ನು ನಮ್ಮ ಶರಣ ಪುಂಗವರು ಈ ರೀತಿ ಚಿಂತಿಸಿ, ಚರ್ಚಿಸಿ, ಅನುಭವದಿಂದ ಸತ್ಯವನ್ನು ಪ್ರತಿಪಾದಿಸುತ್ತಿದ್ದಾರೆ.

★ ಅದ್ವೈತಿಗಳೆಲ್ಲ ಲಿಂಗಾರಾಧನೆ ಹುಸಿಯೆಂದು
ಬುದ್ಧಿ ತಪ್ಪಿ ಕೆಟ್ಟುಹೋದರು.

★ ಅದ್ವೈತವ ಅಂತರಂಗದಲ್ಲಿ ಅರಿದು
ಹೊರಗೆ (ಜ್ಞಾನ) ದಾಸೋಹವ ಮಾಡದಿರ್ದಡೆ
ಎಂತಯ್ಯ ಉಭಯ ಸಂದೇಹದಲ್ಲಿ ನಿಜವಪ್ಪುದು ?

– ಬಸವಣ್ಣನವರು

★ ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ

★ ಬೊಮ್ಮವಾದಿಗಳೆಲ್ಲ ಲಿಂಗಕ್ಕೆ ದೂರಾದರು

– ಅಲ್ಲಮಪ್ರಭು ದೇವರು

★ ಪರಮಾನಂದ ಪರಬ್ರಹ್ಮವು ತಾನೆಂಬ ಅರಿವಿನ ಬಲದ
ಅಹಂಕಾರವಿಲ್ಲವಾಗಿ ಅದ್ವೈತಿಯಲ್ಲ

– ಶ್ರೀ ಸಿದ್ಧರಾಮೇಶ್ವರರು

ಏಕಲಿಂಗ ನಿಷ್ಠಾಪರ ದೃಢವಂತರು ಬನ್ನಿ. ದೇವನೊಬ್ಬ ನಾಮಹಲವು, ನಂಬಿದ ಭಕ್ತಂಗೆ ದೇವನೊಬ್ಬ, ನಂಬಬಲ್ಲ ಹೆಂಡತಿಗೆ ಗಂಡನೊಬ್ಬ ಕಾಣಿರೋ. ಅನ್ಯದೈವವೆಂಬುದು ಹಾದರ ಕಾಣಿರೋ ಎಂಬ ಬಸವ ವಾಕ್ಯಗಳಲ್ಲಿ ನಂಬಿಕೆಯಿಟ್ಟುಕೊಂಡು ಇರುವ ಒಬ್ಬ ದೇವನನ್ನೇ ಶ್ರದ್ಧೆಯಿಂದ ನಂಬಿ, ಅವನ ಸಾಕಾರವಾದ ಇಷ್ಟಲಿಂಗವನ್ನು ಧರಿಸಿದ ಮೇಲೆ ಶರಣರ ಸತ್ಸಂಗದ ಅಗತ್ಯ ಇನ್ನು ಇಲ್ಲ ಎಂದು ನೀವು ಅನುಭವ ಮಂಟಪಕ್ಕೆ ಬರುವುದನ್ನು ಬಿಡಬೇಡಿ. ಏಕೆಂದರೆ ಇಷ್ಟಲಿಂಗವನ್ನು ಧರಿಸಿದ ಮಾತ್ರಕ್ಕೆ ಪರಮಾತ್ಮನ ಒಲುಮೆ ಸಾಧ್ಯವಾಯಿತೆಂದು ಭಾವಿಸಬೇಡಿ. ಎಲ್ಲವನ್ನು ಸಾಧಿಸಿದಂತಾಗಿದೆ ಎಂದುಕೊಂಡು ಬರುವುದನ್ನು ನಿಲ್ಲಿಸಬೇಡಿ. ನೀವು ಮತ್ತೆ ಮತ್ತೆ ಬರಬೇಕು. ನೀವು ಹತ್ತಬೇಕಾದ ಮೆಟ್ಟಿಲು ಇನ್ನು ಇವೆ. ಶರಣರ ಮಾರ್ಗದರ್ಶನದಲ್ಲಿ ಸುರಕ್ಷಿತವಾಗಿ ಕ್ರಮಿಸಬೇಕಾದ ದಾರಿ ಇನ್ನು ಬಹಳ ದೂರವಿದೆ. ಜಗನ್ಮಾತಾ ಅಕ್ಕಮಹಾದೇವಿ, 'ಹಿಂದಣ ಜನ್ಮ ಏನಾದರಾಗಲಿ ; ಮುಂದೆ ನೀ ಕರುಣಿಸ ಚನ್ನಮಲ್ಲಿಕಾರ್ಜುನ ' ಎಂದು ಈಗಾಗಲೇ ಹೇಳಿರುವ ಕಾರಣ ಈಗ ಇಷ್ಟು ಸಾಕು, ಮುಂದಿನ ಜನ್ಮಗಳಲ್ಲಿ ನೋಡೋಣ ಎಂದು ಅಲ್ಲೇ ನಿಲ್ಲಬೇಡಿ. ಮಾನವ ಜನ್ಮದ ಆತ್ಯಂತಿಕ ಸಿದ್ದಿಯಾದ ಪರಮಾತ್ಮನೊಡನೆ ಸಮರಸವ ಸಾಧಿಸಲು ಗುರಿ ತಲುಪುವವರೆಗೂ ನಿಲ್ಲದೆ ಮುನ್ನಡೆಯಲು ನೀವು ಅವಶ್ಯವಾಗಿ ಇಲ್ಲಿಗೆ ಬನ್ನಿರಿ.

ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ. ಜೀವನದಲ್ಲಿ ಒಮ್ಮೆ ಗುರಿ ನಿರ್ಧಾರವಾದ ಮೇಲೆ, ಆ ಗುರಿಯನ್ನು ಯಶಸ್ವಿಯಾಗಿ ತಲುಪಲು ದಾರಿಯೂ ಅಷ್ಟೇ ಮುಖ್ಯ. ಆಗ ಸಾಧಕನಾದವನು ಗುರಿಯನ್ನು ತನ್ನ ಪಾಡಿಗೆ ಬಿಟ್ಟು, ತಲುಪಬೇಕಾದ ದಾರಿಯ ಕಡೆ ಹೆಚ್ಚು ಗಮನಕೊಡಬೇಕು. ಪ್ರತಿ ಹೆಜ್ಜೆಯಲ್ಲೂ ವ್ಯಾಘ್ರರೂಪದ ಮತ್ತು ಗೋಮುಖ ವ್ಯಾಘ್ರ ರೂಪದ ಉಪಾದಿಗಳು ಬಂದು ಕಾಡದಂತೆ, ದಾರಿ ತಪ್ಪಿಸದಂತೆ ಎಚ್ಚರಿಕೆ ವಹಿಸುತ್ತಾ ಮೈಯೆಲ್ಲ ಕಣ್ಣಾಗಿರಬೇಕು. ಆದ್ದರಿಂದ ಬಸವಣ್ಣನವರು ಸುಪಥ ಮಂತ್ರದುಪದೇಶವ ಕಲಿತು ಯುಕ್ತಿಗೆಟ್ಟು ನಡೆಯದಂತೆ, ಗುರು ಪಥವ ಮೀರಿ ನೇಮವನ್ನು ಮಾಡದಂತಿರಲು ಸಾಧಕರಿಗೆ, ಗುರು ಮತ್ತು ಶರಣರ ಸಂಗ ಅತ್ಯಂತ ಶ್ರೇಷ್ಠ ಎಂದು ಬೋಧಿಸುತ್ತಾರೆ. ದಾರಿಯನ್ನು ಸರಿಯಾಗಿ ಕ್ರಮಿಸಿದರೆ ಅದು ನಮ್ಮನ್ನು ಸುರಕ್ಷಿತವಾಗಿ

ಗುರಿಯನ್ನು ತಲುಪಿಸುತ್ತದೆ ಎಂದರಿತ ಧರ್ಮಪಿತರು ನಮಗೂ ಈ ರೀತಿ ಮೊರೆಯಿಡುವುದನ್ನು ಕಲಿಸುತ್ತಿದ್ದಾರೆ. ಆದ್ದರಿಂದ ಸನ್ಮಾರ್ಗದಲ್ಲಿ ಸಾಗಿ ಗುರಿ ಮುಟ್ಟಲು ನೀವು ಅನುಭವ ಮಂಟಪಕ್ಕೆ ಬರಬೇಕು.

★ ಶಿವಬಟ್ಟೆಯಲೆನ್ನನಿರಿಸಯ್ಯ ಹರನೆ

★ ನಿಮ್ಮ ಶರಣರ ಪಥವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು

★ ಶಿವಪಥವನರಿವಡೆ ಗುರುಪಥವೇ ಮೊದಲು

– ಧರ್ಮಪಿತರು

★ ಭಕ್ತನಾದಲ್ಲಿ ಫಲವೇನು ಶಿವಪಥವನರಿಯದನ್ನಕ್ಕ

– ಚನ್ನಬಸವಣ್ಣನವರು

ಇನ್ನು ಗುರಿ ಸರಿಯಿದ್ದರೂ, ಅದನ್ನು ತಲುಪಬೇಕಾದ ದಾರಿಯ ಕಡೆ ಗಮನ ಕೊಡದಿದ್ದರೆ ಹಾದಿ ಮಧ್ಯದಲ್ಲಿಯೆ ಮತ್ತೆ ಚೇತರಿಸಿಕೊಳ್ಳದಂತೆ ತೊಂದರೆಗೆ ಒಳಗಾಗುವವರಿಗೆ, ಧರ್ಮಪಿತರು ಇಲ್ಲಿ ಮಾರ್ಗದರ್ಶನ, ಎಚ್ಚರಿಕೆಯನ್ನು ಈ ರೀತಿ ಕೊಡುತ್ತಿದ್ದಾರೆ.

★ ನಡೆಯುತ್ತ ನಡೆಯುತ್ತ ಬಳಲುವರಲ್ಲದೆ ಬಟ್ಟೆ ಬಳಲುವುದೆ ?
ನಿಜವನರಿಯದ ಭಕ್ತ ಬಳಲುವನಲ್ಲದೆ ಲಿಂಗ ಬಳಲುವುದೆ !

★ ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯ

ಜೀವನದಲ್ಲಿ ಯಶಸ್ಸನ್ನು ಕಾಣಬೇಕೆಂಬ ಭಕ್ತನಿಗೆ ಸಾಧನೆಯ ಹಾದಿಯಲ್ಲಿ ಸಾಗುವಾಗ ಸತ್ಕ್ರಿಯಾಚರಣೆಯು ಅಷ್ಟೇ ಮುಖ್ಯ ಆದ್ದರಿಂದ

ಕ್ರಿಯಾ ಮಥನವಿಲ್ಲದೆ ಕಾಣಬಂದುದೆ ಕಾಷ್ಠದೊಳಗಣ ಅಗ್ನಿ ?
ಇದು ಕಾರಣ ನಮ್ಮ ಗುಹೇಶ್ವರ ಲಿಂಗವ
ತನ್ನೊಳರಿದೆನೆಂಬ ಮಹಾಂತಗೆ ಸತ್‌ಕ್ರಿಯಾಚರಣೆಯೇ ಸಾಧನ ಕಾಣಬೋ

ಎಂದು ಅಲ್ಲಮಪ್ರಭುದೇವರು ಹೇಳುತ್ತಿರುವುದು. ಕಟ್ಟಿಗೆಯೊಳಗೆ ಬೆಂಕಿ ಇರುವುದು ನಿಜವಾದರು ಅದು ಪ್ರಕಟಗೊಳ್ಳಲು ಸಾಕಷ್ಟು ಪ್ರಯತ್ನ ಮಾಡಬೇಕು. ಕಟ್ಟಿಗೆಯಲ್ಲಿ ತೇವ ಇದ್ದರೆ ಬೆಂಕಿ ಹೊತ್ತುವುದಿಲ್ಲ, ಅದನ್ನು ಒಣಗಿಸಿ ನಂತರ ಬೆಂಕಿಯನ್ನು ಸ್ಪರ್ಶಿಸಿದರೆ ಆಗ ಉರಿ ಬೇಗನೆ ಹತ್ತುವುದು ಹಾಗೆಯೇ ಮಾನವ ದೇಹದಲ್ಲಿರುವ ಆತ್ಮ ಶಕ್ತಿ ವಿಕಾಸಗೊಳ್ಳಬೇಕಾದರೆ ಕೇವಲ ತಿಳುವಳಿಕೆ, ಜ್ಞಾನಗಳಿದ್ದರೆ ಸಾಲದು. ಶಿಸ್ತಿನಿಂದ ಕೂಡಿದ ಸಾಧನೆಯೂ ಬೇಕು. ಇಂಥ ಸಾಧನಾ ಪಥವನ್ನು ಸತ್‌ಕ್ರಿಯಾಚರಣೆಯಿಂದ ಕ್ರಮಿಸಲು ನೀವು ಅನುಭಾವ ಮಂಟಪಕ್ಕೆ ತಪ್ಪದೆ ಬರಬೇಕು ಎಂದು ಉಗ್ಘಡಿಸುವ ಕಾಯಕದ ಬಿಬ್ಬಿದೇವಯ್ಯನವರು ತಾವಷ್ಟೇ ಜೀವನದ ಸಾರ್ಥಕ್ಯವನ್ನು ಕಾಣಲು ಬಯಸದೆ ಜತೆಗೆ ಇತರ ಭಕ್ತ-ಸಾಧಕ ವೃಂದದವರನ್ನು ಮುಕ್ತಿಪಥಕ್ಕೆ ಕರೆದೊಯ್ಯಬೇಕೆಂಬ ಮಹದುದ್ದೇಶದಿಂದ ಮುಮುಕ್ಷುಗಳನ್ನು ಹೃತ್ಪೂರ್ವಕವಾಗಿ ಅನುಭವ ಮಂಟಪಕ್ಕೆ ಆಹ್ವಾನಿಸುತ್ತಿದ್ದಾರೆ.

★★★

ಆದಿ ಶರಣರ ಸ್ತೋತ್ರ

ರಚನೆ : ಬಸವಾತ್ಮಜೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತವತ್ಸಲ ಇಷ್ಟಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ॥

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ತ್ವನಿಷ್ಠುರಿ ಅಂಬಿಗರ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ

27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೋಳೀಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಯಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ

63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಟಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ಧಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ದಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲಿಂಗ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111. ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113. ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114. ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115. ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116. ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117. ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118. ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119. ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120. ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121. ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122. ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123. ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124. ನಿಜಾನುಭಾವಿ ನುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125. ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127. ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129. ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130. ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131. ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132. ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133. ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134. ಬಾಲಬೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

135. ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136. ಬಾಹೂರ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137. ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138. ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139.ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140.ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141.ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142.ಮನಸಂದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143.ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144.ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145.ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146.ಮಹಾದೇವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
147.ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148.ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149.ಮರುಳುದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150.ಮಲುಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
151.ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
152.ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153.ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154.ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155.ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156.ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157.ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158.ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159.ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160.ರೇಚದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161.ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162.ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163.ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164.ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165.ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166.ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167.ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
168.ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169.ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170.ಶಿವನಾಗಮಯ್ಯ ಶರಣರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ

171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ಘವಣಿಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
191. ಮೊರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಸದ್ಯೋನ್ಮುಕ್ತ ಶರಣ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
200. ಸಕಲ ಆದಿಪ್ರಮಥ ಗಣಂಗಳಿಗೆ ಶರಣು, ಶರಣು ಶರಣಾರ್ಥಿ

ಜಯ ಬಸವರಾಜ ಭಕ್ತಜನ ಸುರಭೂಜಾ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀಗುರು ಬಸವಾ ||
ರಕ್ಷಿಸು ಶ್ರೀ ಗುರು ಬಸವಾ ||

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದ್ದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಮಾರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣುಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ, ಇದೀಗ ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ, ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯ-ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು

ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲಕ್ಷದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ: ಸಮುದಾಯ ಜೀವನದ ಶ್ರೇಷ್ಠಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ 7 ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಆನೆಗಳು ಬಲಿಷ್ಠಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದು ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ

ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲಸಂಗಮಕ್ಕೆ ಧಾವಿಸಿ ಬಂದು ಜನವರಿ 12 ರಿಂದ 15 ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ-ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ-ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ ಬಸವಣ್ಣ
(ಗ್ರಹಿಸಿದವರು-ಬಸವಾತ್ಮಜೆ ಮಾತಾಜಿ)

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666



ಧರ್ಮಗುರು ಬಸವಣ್ಣ

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ಕಾಯಕ - ದಿನದ ಅಂಗವಾಗಿ ಮೂರನೆಯ

ಕಲ್ಯಾಣ ಪರ್ವ

2004 ರ ಮೇ 1, 2 ಮತ್ತು 3 ರಂದು



ವಚನ ಸಾಹಿತ್ಯ

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಸಲಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 17ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

''ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು''

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy Land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ'' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ ''ಕಲ್ಯಾಣ ಪರ್ವ'' ವನ್ನು ನಡೆಸಲಾಗುತ್ತಿದೆ. ಮೂರನೆಯ ಕಲ್ಯಾಣ

ಪರ್ವವನ್ನು 2004ನೆಯ ಇಸವಿಯ ಮೇ 1,2 ಮತ್ತು 3 ರಂದು ಬಸವ ಮಹಾಮನೆಯ ಆವರಣದಲ್ಲಿ ಸಂಯೋಜಿಸಲಾಗಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮಾತ್ರವಲ್ಲ; ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare State) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ. ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಚಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು. '' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 30ರ ರಾತ್ರಿಯಿಂದ ಮೇ 4ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ	4. ಹಿತೈಷಿಗಳು	: 500 ರೂ
2. ಪೋಷಕರು	: 2000 ರೂ. ಮತ್ತು ಮೇಲೆ	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
3. ದಾನಿಗಳು	: 1000 ರೂ. ಮತ್ತು ಮೇಲೆ	6. ಪ್ರತಿನಿಧಿ ಶುಲ್ಕ	: 100 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಮತ್ತು ದವಸ, ಧಾನ್ಯಗಳನ್ನು ತಮ್ಮ ಶಕ್ತ್ಯಾನುಸಾರ ಕೊಡಬಹುದು

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸಿ ಕೊಡುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿಮೂರುವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ

ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ. 2. ನಿತ್ಯ ಪೂಜಾ ನಿಧಿ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಅಂಚೆಯಲ್ಲಿ ಕಳಿಸಲಾಗುವುದು. 600 ರೂ. **3. ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು ಮತ್ತು ಪ್ರಸಾದವನ್ನು ದಾನಿಗಳಿಗೆ ಅಂಚೆಯಲ್ಲಿ ಕಳಿಸುವುದು. 1200 ರೂ. **4. ಬಸವಾಲಯ ನಿರ್ಮಾಣ :** ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು. **5. ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ "ಬಸವ ಮಂಟಪ" ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು. **6. ಬಸವೇಶ್ವರ ಸಮುದಾಯ ಭವನ :** ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು. **7. ಶರಣ ಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ.ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು. **8. 63 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ :** ಅಂದಾಜು ವೆಚ್ಚ 1 ಕೋಟಿ ರೂಪಾಯಿಗಳು ರೂ. 11,000 ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. **9. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್** ಸ್ಮಾರಕ ರಚನೆ ಇತ್ಯಾದಿ.

ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಜನರ ನೆರವು ಸಿಕ್ಕಿದಂತೆ ಒಂದೊಂದಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್ ಕಟ್ಟಲು, ಕಾರ್ಯಾಲಯ ಕಟ್ಟಡ ನಿರ್ಮಾಣ ಮಾಡಲು, ಬಸವಾಲಯ ಕಟ್ಟಲು ಆರಂಭಿಸಲಾಗಿದೆ. ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ:
ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-251921/252856

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಮಹಾಮನೆಯ ಆವರಣದಲ್ಲಿ

ಕಲ್ಯಾಣ ಪರ್ವ

2002 ರ ಮೇ 1,2 ಮತ್ತು 3 ರಂದು ನಡೆಯುವ ಕಾರ್ಯಕ್ರಮದ ರೂಪುರೇಷೆಗಳು

ಮೇ 1. ವಿಶ್ವಕಾಯಕ ದಿನ

ಬೆಳಗ್ಗೆ 10 ಗಂಟೆಗೆ ಜ್ಯೋತಿಗಳಿಗೆ ಸ್ವಾಗತ
10-15 ಬಸವ ಧ್ವಜಾರೋಹಣ
10-30 ಕಲ್ಯಾಣ ಜ್ಯೋತಿಯ ಪ್ರಜ್ವಲನೆ
11-00 ರಿಂದ 2-30 ಉದ್ಘಾಟನಾ ಸಮಾವೇಶ.
ಮಧ್ಯಾಹ್ನ 4-00 ರಿಂದ 6-00 ರಾಷ್ಟ್ರೀಯ ಭಾವೈಕ್ಯತಾಗೋಷ್ಠಿ
ವಿಷಯ : ಕಲ್ಯಾಣ ರಾಜ್ಯದ ಪರಿಕಲ್ಪನೆ
ಸಂಜೆ 6-30 ರಿಂದ 9-00 ತತ್ತ್ವ ಚಿಂತನಗೋಷ್ಠಿ
ವಿಷಯ : ಸಮಾಜದ ಸರ್ವಾಂಗೀಣ ಅಭಿವೃದ್ಧಿ
9 ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

ಮೇ 2 ಶರಣ ವಂದನ ದಿನ

ಬೆಳಿಗ್ಗೆ 7-30 ರಿಂದ 9-30 ಸಾಮೂಹಿಕ ಇಷ್ಟಲಿಂಗಾರ್ಚನೆ
11-00 ರಿಂದ 2-30 ಸಾಮೂಹಿಕ ಪ್ರಾರ್ಥನೆ
ಶರಣಾರ್ಥಿ - ಶರಣ ವಂದನ ಮತ್ತು ಉಪನ್ಯಾಸ
ಮಧ್ಯಾಹ್ನ 4-00 ರಿಂದ 6-00 ಪಥ ಸಂಚಲನ, ಮೆರವಣಿಗೆ ಬಸವ ಕಲ್ಯಾಣದ ಮಧ್ಯಭಾಗದಲ್ಲಿರುವ ಬಸವೇಶ್ವರ ವೃತ್ತ ಅಥವಾ ಬಸವೇಶ್ವರ ದೇವಾಲಯದಿಂದ
ಸಂಜೆ 6-30 ರಿಂದ 9-00 ಧರ್ಮ ಚಿಂತನಗೋಷ್ಠಿ
ವಿಷಯ : ಬಸವ ಧರ್ಮ ಪರಿಪೂರ್ಣ ಧರ್ಮ
9 ರ ನಂತರ ಸಾಂಸ್ಕೃತಿಕ ಕಾರ್ಯಕ್ರಮ

ಮೇ 3 ಶೂನ್ಯ ಪೀಠ ಸ್ಥಾಪನೆಯ ಸಂಸ್ಮರಣೋತ್ಸವ ಮತ್ತು ಸಮಾರೋಪ ಸಮಾರಂಭ

ಬೆಳಗ್ಗೆ 10-30 ರಿಂದ 2-30
ಸಂಜೆ 6-30 ರಿಂದ ಪೂಜ್ಯ ಸ್ವಾಮಿಗಳವರಿಂದ ಉಪನ್ಯಾಸಗಳು

ಸಮಾರೋಪ ಸಮಾರಂಭದ ನಂತರ ಊರಿಗೆ ತೆರಳಬೇಕು ಎನ್ನುವವರಿಗೆ ಅನುಮತಿ ಇದೆ. ಸಾಕಷ್ಟು ಜನರು ಇನ್ನು ಉಳಿದಿರುವುದರಿಂದ ಭಾಗವಹಿಸಿದ ಪೂಜ್ಯ ಸ್ವಾಮಿಗಳು ಮತ್ತು ಪೂಜ್ಯ ಮಾತೆಯವರುಗಳಿಂದ ಪ್ರವಚನ ಏರ್ಪಡಿಸಲಾಗುತ್ತದೆ.

ಸಾಮೂಹಿಕ ಇಷ್ಟಲಿಂಗ ಪೂಜೆ, ಪ್ರಾರ್ಥನೆ ಮತ್ತು ಪಥ ಸಂಚಲನ

ಶರಣ ಬಂಧುಗಳೇ,

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನಡೆಯುತ್ತಿರುವ ಕಲ್ಯಾಣ ಪರ್ವವು ಮಹತ್ವಪೂರ್ಣ ಐತಿಹಾಸಿಕ ಸಮಾವೇಶ. ಕಲ್ಯಾಣ ಕ್ರಾಂತಿಯಿಂದ ನೊಂದು ಕಲ್ಯಾಣವನ್ನು ತೊರೆದಿದ್ದ ಆದಿ ಶರಣರ ದಿವ್ಯ ಸಂಕಲ್ಪಗಳನ್ನು ಶರಣ ಸಂತಾನವಾದ ನಾವು ನೀವೆಲ್ಲರೂ ಪೂರೈಸುವ ಸುವರ್ಣ ಸಮಯವಿಗ ಒದಗಿ ಬಂದಿದೆ. ಕಲ್ಯಾಣ ಪರ್ವದ ಕಾರ್ಯಾಕ್ರಮದ ವಿವರ ನೀಡಲಾಗಿದೆ. ಇದರಲ್ಲಿ ಅತ್ಯಂತ ಪವಿತ್ರ ಧಾರ್ಮಿಕ ವಿಧಿ ಎಂದು ಭಾವಿಸಿ ಆಚರಿಸಬೇಕಾದುವು ಎಂದರೆ ಮೇ 2 ರಂದು ನಡೆಯುವ

1. ಸಾಮೂಹಿಕ ಇಷ್ಟಲಿಂಗಾರ್ಚನೆ - ಬೆಳಗ್ಗೆ 7-30
2. ಸಾಮೂಹಿಕ ಪ್ರಾರ್ಥನೆ ಮತ್ತು ಶರಣ ವಂದನೆ - 10-30
3. ಬಸವಣ್ಣನವರ ಭಾವಚಿತ್ರ ಮೆರವಣಿಗೆ, ಪಥ ಸಂಚಲನ ಸಂಜೆ 4 ರಿಂದ

ಈ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುವ ಎಲ್ಲರೂ ಕಡ್ಡಾಯವಾಗಿ ಬಿಳಿಯ ಬಟ್ಟೆ ಧರಿಸಿ ಮೇಲೆ ಕಾವಿಯ ಪವಿತ್ರ ವಸ್ತ್ರ(ಸ್ಕಾರ್ಫ್) ಧರಿಸಬೇಕು. ಷಟ್‌ಕೋನ ಚಿತ್ರ ಮುದ್ರಿತವಾಗಿರುವ ಬಿಳಿಯ ಟೋಪಿಗಳನ್ನು ಶರಣರು ಧರಿಸಬೇಕು. ಪಾದೆಯಾತ್ರೆಯಲ್ಲಿ ಹೇಗೇಗೋ ಕುಣಿಯದೆ ಮಂತ್ರಘೋಷ ಮಾಡುತ್ತ ಶಾಂತವಾಗಿ ಸಾಗಬೇಕು. ಇಷ್ಟಲಿಂಗಾರ್ಚನೆಗೆ ಮಜ್ಜನ ಪಾತ್ರೆ, ಲೋಟ, ವಿಭೂತಿ ಮಂತಾದ ಸಾಮಾನು ತಂದಿರಬೇಕು.

ಶೂನ್ಯ ಪೀಠಾರೋಹಣ ಸಂಸ್ಮರಣೆ

ಮೇ 3 ರಂದು ಬೆಳಗ್ಗೆ 10-30 ರಿಂದ ಪ್ರಾರಂಭವಾಗುತ್ತದೆ. 12ನೇ ಶತಮಾನದ ಅನುಭವ ಮಂಟಪದ ಮಹತ್ ಸಾಧನೆಗಳಲ್ಲಿ ಒಂದು ಶೂನ್ಯಪೀಠ ಸ್ಥಾಪನೆ ಮತ್ತುವ್ಯೋಮಕಾಯ ಸಿದ್ಧ. ಅಲ್ಲಮ ಪ್ರಭುದೇವರ ಪೀಠಾರೋಹಣ ಇದು ನಡೆದುದು ವಿಶ್ವಾವಸು ಸಂವತ್ಸರದ ಚೈತ್ರ ಮಾಸದ ಚೈತ್ರ ಶುದ್ಧ ಪ್ರತಿಪದೆಯಂದು. ಜಾತಿಯಿಂದ ಗುರುತ್ವ ಬರದು, ಸಾಧನೆಯಿಂದ ಬರುತ್ತದೆ ಎಂಬ ಬಸವ ವಾಣಿಯನ್ನು ಸಾಕಾರಗೊಳಿಸಿ, ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದ ಅಲ್ಲಮ ಪ್ರಭುವನ್ನು ಪೀಠಾರೋಹಣ ಮಾಡಿಸಿದ ಕೀರ್ತಿ ಬಸವಣ್ಣನವರದು. ಇಂಥ ಶೂನ್ಯ ಪೀಠ ಸ್ಥಾಪನೆಯಾದುದು ಕ್ರಿ.ಶ. 1184 ರಲ್ಲಿ ಅದರ ಸಂಸ್ಮರಣೆಯನ್ನು ಆಚರಿಸಲಾಗುವುದು ಅದರೊಡನೆಯೇ ಕಲ್ಯಾಣ ಪರ್ವದ ಸಮಾರೋಪ ಸಮಾರಂಭ ಜರುಗುವುದು.

ಬಸವ ಕಲ್ಯಾಣ - ಸ್ಥಳ ನಿರ್ದೇಶನ ಮತ್ತು ವಾಹನಾನುಕೂಲ

ಬೀದರ್ ಜಿಲ್ಲೆಯ ತಾಲ್ಲೋಕು ಕೇಂದ್ರ ಬಸವ ಕಲ್ಯಾಣ. ಮುಂಬಯಿ-ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ 9 ಕ್ಕೆ ಸನಿಹದಲ್ಲಿದೆ. ಹೈದರಾಬಾದಿನಿಂದ ಸುಮಾರು 185 ಕಿ.ಮೀ. ಸೊಲ್ಲಾಪುರದಿಂದ 120 ಕಿ.ಮೀ. ದೂರದಲ್ಲಿದೆ. ಬೆಂಗಳೂರಿನಿಂದ-ಹೈದರಾಬಾದ್ ಮಾರ್ಗವಾಗಿ ಹೋದರೂ 770 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 13, ಚಿತ್ರದುರ್ಗ, (ಕೂಡಲ ಸಂಗಮ) ಬಿಜಾಪುರ, ಸೊಲ್ಲಾಪುರ ಮಾರ್ಗವಾಗಿ ಹೋದರೂ ಅಷ್ಟೇ ದೂರ. ಟ್ರೇನ್ ಮೂಲಕ ಗುಲಬರ್ಗಾಕ್ಕೆ ಹೋಗಿ ಅಲ್ಲಿಂದ ಬಸ್ಸಿನಲ್ಲಿ ಬಸವ ಕಲ್ಯಾಣಕ್ಕೆ ಬರಬಹುದು.

ಗುಲಬರ್ಗಾ ರಾಷ್ಟ್ರೀಯ ಬಸವ ದಳದವರು ಬಸವ ಮಂಟಪದಲ್ಲಿ (ಗುಲಬರ್ಗಾದ ಮಹಂತ ನಗರದ ಖೂಬಾ ಪ್ಲಾಟ್‌ದಲ್ಲಿ ಸಿವಿಲ್ ಕೋರ್ಟ್ ಮತ್ತು ಪಾಟೀಲ್ ದವಾಖಾನೆಯ ಸಮೀಪದಲ್ಲಿ ರಾಷ್ಟ್ರೀಯ ಬಸವ ದಳದ ಬಸವ ಮಂಪಟ ಇದೆ) ಕಲ್ಯಾಣ ಪರ್ವಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಸ್ನಾನ-ಪೂಜೆ-ಉಪಾಹಾರ-ಊಟದ ವ್ಯವಸ್ಥೆ ಮಾಡುತ್ತಿರುವರು. ಇದರ ಸದುಪಯೋಗ ಮಾಡಿಕೊಳ್ಳಬಹುದು. ಬಸ್ ಸ್ಟ್ಯಾಂಡ್, ರೇಲ್ವೆ ಸ್ಟೇಷನ್ ಬಳಿ ಒಳ್ಳೆಯ ಲಾಡ್ಜಿಂಗ್‌ಗಳಿವೆ. ಅಲ್ಲಿಯೇ ಸ್ನಾನ-ಪೂಜೆ-ಉಪಾಹಾರ ಮುಗಿಸಿ, ಕಲಬುರ್ಗಿಯಲ್ಲಿ ಶರಣ ಬಸವೇಶ್ವರ ದೇವಾಲಯ, ಬಸವ ಮಂಟಪ ಸಂದರ್ಶಿಸಿ ಬಸವ ಕಲ್ಯಾಣಕ್ಕೆ ಬರಬಹುದು.

ರೈಲ್ವೆ ವಿವರ :

1. ಕರ್ನಾಟಕ ಎಕ್ಸ್‌ಪ್ರೆಸ್. Train No. 2627 (super fast) ಬೆಂಗಳೂರು ಬಿಡುವ ವೇಳೆ. ಸಂಜೆ 6-25, ಗುಲಬರ್ಗಾ ತಲುಪುವ ವೇಳೆ ಮುಂಜಾನೆ 5-50. ದಿನ ನಿತ್ಯವೂ ಹೊರಡುವುದು.
2. ಉದ್ಯಾನ್ ಎಕ್ಸ್‌ಪ್ರೆಸ್. Train No. 6530 ಬೆಂಗಳೂರು ಬಿಡುವ ವೇಳೆ ರಾತ್ರಿ 8-30. ಗುಲಬರ್ಗಾ ತಲುಪುವ ವೇಳೆ ಬೆಳಿಗ್ಗೆ 8-35.
3. ಕುರ್ಲಾ ಎಕ್ಸ್‌ಪ್ರೆಸ್, ಕೊಯಮತ್ತೂರು-ಕುರ್ಲಾ. Train No. 1014 ಬೆಂಗಳೂರು ಬಿಡುವ ವೇಳೆ ಮಧ್ಯಾಹ್ನ 12-45. ಗುಲಬರ್ಗಾ ತಲುಪುವ ವೇಳೆ ರಾತ್ರಿ 12-30.
4. ಬೆಂಗಳೂರು-ನಾಂದೇಡ್ Link Express Train No. 6592 A ಬೆಂಗಳೂರು ಬಿಡುವ ವೇಳೆ ರಾತ್ರಿ 10 ಗಂಟೆ, ಬೀದರ್ ತಲುಪುವ ವೇಳೆ ಮರುದಿನ ಮಧ್ಯಾಹ್ನ 2-50, ಭಾಲ್ಕಿ ಮಧ್ಯಾಹ್ನ 3-40. ಈ ಟ್ರೇನ್ ನಿಧಾನವಾಗಿ ಹೋಗುತ್ತದೆ. ಗುಲಬರ್ಗಾಕ್ಕೆ ಹೋಗುವುದಿಲ್ಲ. ಬೀದರ್, ಭಾಲ್ಕಿಗೆ ಹೋಗುತ್ತದೆ. ಭಾಲ್ಕಿಯಿಂದ ಬಸವ ಕಲ್ಯಾಣ ಕೇವಲ 35 ಕಿ.ಮೀಟರ್.

ವಾರದಲ್ಲಿ ಒಂದು ದಿನ ಹೋಗುವ ಟ್ರೇನ್‌ಗಳು

5. ಕೊಯಮತ್ತೂರು - ರಾಜಕೋಟ್. Train No. 6614 ಶನಿವಾರ ಮಾತ್ರ ಹೊರಡುತ್ತದೆ. ಬೆಂಗಳೂರಿನ ಕೃಷ್ಣರಾಜಪುರಂ ನಿಲ್ದಾಣದಿಂದ ಹೊರಡುವ ವೇಳೆ ಬೆಳಗ್ಗೆ 8-00, ಗುಲಬರ್ಗಾ ತಲುಪುವ ವೇಳೆ ಸಾಯಂಕಾಲ 7-30.
6. ಬೆಂಗಳೂರು - ಅಹಮದಾಬಾದ್ ಎಕ್ಸ್‌ಪ್ರೆಸ್. Train No. 6502 ರವಿವಾರ ಮಾತ್ರ.

ಬೆಂಗಳೂರಿನಿಂದ ಮಧ್ಯಾಹ್ನ 1-30ಕ್ಕೆ ಬಿಡುವುದು, ಗುಲಬರ್ಗಾ ತಲುಪುವ ವೇಳೆ ಬೆಳಗಿನ ಜಾವ 1-45 ಕ್ಕೆ ತಲುಪುತ್ತದೆ.

ಕರ್ನಾಟಕ ಎಕ್ಸ್‌ಪ್ರೆಸ್, ಉದ್ಯಾನ್ ಎಕ್ಸ್‌ಪ್ರೆಸ್ ಗುಲಬರ್ಗಾ ತಲುಪಲು ಬಹಳ ಅನುಕೂಲಕರವಾಗಿವೆ. ಅದೇ ರೀತಿ ವಾಪಸ್ಸು ಬರಲು ಸಹ ಅನುಕೂಲಕರವಾಗಿವೆ. ದಿ. 30-4-2004 ರ ರಾತ್ರಿ ಬೆಂಗಳೂರಿನಿಂದ ಹೊರಡಬಹುದು.

ಗುಲಬರ್ಗಾದಿಂದ ಪುನಃ ಹೊರಡಲು ಇರುವ ಟ್ರೇನ್

1. ಉದ್ಯಾನ್ ಎಕ್ಸ್‌ಪ್ರೆಸ್. ಗುಲಬರ್ಗಾದಿಂದ ಸಂಜೆ 6-50, ಬೆಂಗಳೂರು ತಲುಪುವುದು 8-35
2. ಕರ್ನಾಟಕ ಎಕ್ಸ್‌ಪ್ರೆಸ್. ಗುಲಬರ್ಗಾದಿಂದ ರಾತ್ರಿ 2-00 ಬೆಂಗಳೂರು ತಲುಪುವುದು ಮಧ್ಯಾಹ್ನ 2-00
3. ಕುರ್ಲಾ - ಕೊಯಮತ್ತೂರು ಎಕ್ಸ್‌ಪ್ರೆಸ್, ಗುಲಬರ್ಗಾ ಬೆಳಿಗ್ಗೆ 9-20, ಬೆಂಗಳೂರು ತಲುಪುವುದು ರಾತ್ರಿ 11.

ಬೆಂಗಳೂರಿನ ಬಸವ ಮಂಟಪದಿಂದ ದಿ. 30-4-2004 ರಂದು ಮಧ್ಯಾಹ್ನ 1 ಗಂಟೆಗೆ ಹೈಟೆಕ್ ಬಸ್ಸು ಹೊರಡಿಸಲಾಗುವುದು. ಪುನಃ ದಿ. 4-4-2004 ರಂದು ಬಸವ ಕಲ್ಯಾಣದಿಂದ ಬಸ್ಸು ಹೊರಡುವುದು.

ಬೆಂಗಳೂರಿನಿಂದ ಬಸವ ಕಲ್ಯಾಣಕ್ಕೆ ಇರುವ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು

1. ಮಧ್ಯಾಹ್ನ 1 ಗಂಟೆಗೆ, ಚಿತ್ರದುರ್ಗ, ಹೊಸಪೇಟೆ, ಲಿಂಗಸೂರು, ಸುರಪುರ-ಶಹಾಪುರ, ಜೇವರ್ಗಿ, ಗುಲಬರ್ಗಾ ಮಾರ್ಗವಾಗಿ ಬಸವ ಕಲ್ಯಾಣವನ್ನು ಬೆಳಿಗ್ಗೆ 6-ಗಂಟೆಗೆ ತಲುಪುತ್ತದೆ.
2. ಮಧ್ಯಾಹ್ನ 3-30ಕ್ಕೆ ಹೈದ್ರಾಬಾದ್ ಮಾರ್ಗವಾಗಿ ಬಸವ ಕಲ್ಯಾಣಕ್ಕೆ ಬೆಳಿಗ್ಗೆ 7-30ಕ್ಕೆ ತಲುಪುತ್ತದೆ.

ಟ್ರೇನ್, ಬಸ್ಸುಗಳಿಗೆ ರಿಸರ್ವೇಷನ್ ಮಾಡಿಸಲು ನೆರವಾಗುವ ಕಾರಣ ಅಗತ್ಯವಿರುವವರು ಎಲ್ಲ ವಿವರಗಳಿಗಾಗಿ ಫೋನ್ ಮೂಲಕ ಸಂಪರ್ಕಿಸಿರಿ.

ಶರಣ. ನಿತ್ಯಾನಂದ, ಬಸವ ಮಂಟಪ, 2035, 2ನೇ ಬ್ಲಾಕ್
20ನೇ ಮೇನ್, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560010
ದೂರವಾಣಿ ಸಂಖ್ಯೆ : 23322790/23325335

ಬಸವ ದರ್ಶನ

ಬಸವ ಮಾಡಿದೊಡಾಯ್ತು ಗುರುನೆಲೆ
ಬಸವ ಮಾಡಿದೊಡಾಯ್ತು ಲಿಂಗವು
ಬಸವ ಮಾಡಿದೊಡಾಯ್ತು ಜಂಗಮವರಿದ ಮಹಿಮಂಗೆ
ಬಸವನಿಂಧ್ಯಾತ್ಮವೇ ಪಸರಿಸಿತು
ಲೋಕದೊಳಂತು ಕಾರಣ ಬಸವಣ್ಣನೇ
ಪರದೈವವೆನುತಿರ್ದ ಗುರುರಾಯ - ಚಾಮರಸ



ಬೆಂಗಳೂರು ಗಣಾಚಾರ ದಳದವರು ನೀಡಿದ ವಚನ ಸಾಹಿತ್ಯದ ಪುಸ್ತಕಗಳ ಕೊಡುಗೆಯನ್ನು ಪೂಜ್ಯ ಮಾತಾಜಿಯವರಿಂದ ಸ್ವೀಕರಿಸುತ್ತಿರುವ, ಶರಣ ಷಡಾಕ್ಷರಪ್ಪನವರು



ಭದ್ರಾವತಿ ಬಸವ ಮಂಟಪಕ್ಕೆ ಜೈಪುರದಿಂದ ತರಿಸಿರುವ ವಿಶ್ವಗುರು ಬಸವಣ್ಣನವರ ಅಮೃತಶಿಲಾ ಪುತ್ಥಳಿ

CPMG/KA/BGW - 50/2003-2005 WPP(W) - 17 R.No. 19980/70

